ಓಂ ಶಾಂತಿ, ಬಾಪ್‍ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-01-1978.

# *ನಿರೀಕ್ಷಣೆಗೆ ಮೊದಲು ತಯಾರಿ ಮಾಡಿಕೊಳ್ಳಿರಿ.*

(इन्तज़ार के पहले इन्तज़ाम करो)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಕಲ್ಯಾಣಕಾರಿ, ಮಹಾದಾನಿ ಮಹಾವರದಾನಿಯಾಗಿ ತಯಾರು ಮಾಡುವ ದಯಾಸಾಗರನಾದ ತಂದೆ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ತಂದೆಯು ಮಕ್ಕಳನ್ನು ನೋಡಿ ಸದಾ ಹರ್ಷಿತವಾಗಿದ್ದಾರೆ. ಮಕ್ಕಳಲ್ಲಿ ಪ್ರತಿಯೊಬ್ಬರೂ ವರ್ತಮಾನ ಸಮಯದಲ್ಲಿ ವಿಶ್ವದ ಸರ್ವ ಆತ್ಮರಲ್ಲಿ ಶ್ರೇಷ್ಠ ಆಗಿದ್ದೀರಿ ಹಾಗೂ ಭವಿಷ್ಯದಲ್ಲಿಯೂ ವಿಶ್ವದ ಮೂಲಕ ಪೂಜ್ಯರಾಗಿದ್ದೀರಿ ಎನ್ನುವುದನ್ನು ನೋಡಿ ತಂದೆಯು ಸದಾ ಹರ್ಷಿತ ಆಗುತ್ತಾರೆ. ಇಂತಹ ಸರ್ವಶ್ರೇಷ್ಠ ಸ್ತುತಿ(ಮಹಿಮೆ) ಹಾಗೂ ಪೂಜೆಗೆ ಯೋಗ್ಯ ಯೋಗೀ ಆತ್ಮರು, ಜ್ಞಾನಿ ಆತ್ಮರು ದಿವ್ಯಗುಣಧಾರಿ ಹಾಗೂ ಸದಾ ವಿಶ್ವದ ಸೇವಾಧಾರಿ, ಬಾಪ್‍ದಾದಾರವರ ಸ್ನೇಹ ಸಹಯೋಗದಲ್ಲಿ ಸದಾ ಇರುವ ಆತ್ಮರು, ಅಂತಹ ಮಕ್ಕಳನ್ನು ನೋಡಿ ತಂದೆಗೆ ಎಷ್ಟು ಆನಂದ ಆಗುತ್ತದೆ. ಮಕ್ಕಳಲ್ಲಿ ಅನುಕ್ರಮ(ನಂಬರ್ ವಾರ್) ಇದ್ದರೂ ಸಹ ಕೊನೆಯ ಸ್ಥಾನದ ಮಣಿಯೂ ಸಹ ವಿಶ್ವದ ಮುಂದೆ ಶ್ರೇಷ್ಠ ಆಗಿದೆ. ಹೀಗೆ ನಿಮ್ಮ ಶ್ರೇಷ್ಠತೆಯನ್ನು ನಿಮ್ಮ ಮಹಿಮೆಯನ್ನು ಅರಿತುಕೊಂಡು ಅಥವಾ ನಡೆಯುತ್ತಾ ನಿಮ್ಮನ್ನು ಸಾಧಾರಣರು ಎಂದು ತಿಳಿದುಕೊಂಡುಬಿಡುತ್ತೀರೋ? ಅಲೌಕಿಕ ತಂದೆಯ ಮೂಲಕ ಪ್ರಾಪ್ತಿಯಾಗಿರುವ ಅಲೌಕಿಕ ಜೀವನ, ಅಲೌಕಿಕ ಕರ್ಮವು ಸಾಧಾರಣ ಜೀವನವೇನಲ್ಲ. ಕೊನೆಯ ಸ್ಥಾನದ ಮಣಿಯನ್ನೂ ಸಹ ಇಂದು ಅಂತ್ಯದವರೆಗೆ ಭಕ್ತಾತ್ಮರು ಕಣ್ಣುಗಳಲ್ಲಿ ಸಮಾವೇಶಗೊಳಿಸಿಕೊಳ್ಳುತ್ತಾರೆ. ಏಕೆಂದರೆ ಅಂತಿಮ ಸ್ಥಾನದ ಮಣಿಯೂ ಸಹ ಬಾಪ್‍ದಾದಾರವರ ಕಣ್ಣುಗಳ ನಕ್ಷತ್ರ ಆಗಿದೆ, ಪ್ರಕಾಶಮಯ ರತ್ನ ಆಗಿದೆ. ಅಂತಹ ಪ್ರಕಾಶಮಯ ರತ್ನವನ್ನು ಇಲ್ಲಿಯವರೆಗೂ ಕಣ್ಣುಗಳ ಮೇಲೆ ಇಟ್ಟುಕೊಳ್ಳಲಾಗುತ್ತದೆ. ನಿಮ್ಮ ಶ್ರೇಷ್ಠ ಭಾಗ್ಯವನ್ನು ತಿಳಿದುಕೊಂಡಿದ್ದರೂ ವರ್ಣನೆ ಮಾಡುತ್ತಿದ್ದರೂ ಸಹ ಏನೂ ತಿಳಿಯದವರಾಗಿಬಿಟ್ಟಿದ್ದೀರಿ. ಒಂದು ಸಲವಾದರೂ ಮನಃಪೂರ್ವಕವಾಗಿ ಸತ್ಯವಾದ ಹೃದಯದಿಂದ ನಿಮ್ಮನ್ನು ತಂದೆಯ ಮಗು

ಎಂದು ನಿಶ್ಚಯ ಮಾಡಿಕೊಂಡರೆ ಆ ಒಂದು ಸೆಕೆಂಡ್‌ನ ಮಹಿಮೆ ಹಾಗೂ ಪ್ರಾಪ್ತಿಯು ಬಹಳ ದೊಡ್ಡದಾಗುತ್ತದೆ. ನೇರವಾಗಿ ತಂದೆಯ ಮಗು ಆಗುವುದು ಎಷ್ಟು ದೊಡ್ಡ ಲಾಟರಿ ಆಗಿದೆ ಎನ್ನುವುದು ಗೊತ್ತಿದೆಯೇ, ಒಂದು ಕ್ಷಣದಲ್ಲಿ ನಾಮ, ಸಂಸ್ಕಾರ ಶೂದ್ರರಿಂದ ಬ್ರಾಹ್ಮಣ ಆಗಿಬಿಡುತ್ತದೆ. ಸಂಸ್ಕಾರವು ಬದಲಾಗಿಬಿಡುತ್ತದೆ. ದೃಷ್ಟಿ, ವೃತ್ತಿ, ಸ್ಮೃತಿ ಎಲ್ಲವೂ ಒಂದು ಕ್ಷಣದ ನಾಟಕದಲ್ಲಿ ಬದಲಾಗಿಬಿಡುತ್ತದೆ. ಅಂತಹ ಶ್ರೇಷ್ಠ ಘಳಿಗೆಯನ್ನು ಮರೆತುಬಿಡುತ್ತೀರಾ? ಪ್ರಪಂಚದ ಜನರು ಇಲ್ಲಿಯವರಗೂ ಮರೆತಿಲ್ಲ ನೀವು ಆತ್ಮರು ಚಕ್ರವನ್ನು ಸುತ್ತುತ್ತಾ ಬದಲಾವಣೆ ಆಗಿಯೇ ಬಿಟ್ಟಿರಿ. ಆದರೆ ಪ್ರಪಂಚದ ಜನರು ಮರೆತಿಲ್ಲ. ಈಗ ಮೂವರು ತಂದೆಯರು ಎನ್ನುವ ಭಾಗ್ಯವನ್ನು ವರ್ಣನೆ ಮಾಡುತ್ತಾ ಎಷ್ಟು ಸಂತೋಷ ಪಡುತ್ತೇವೆ. ಭಗವಂತನೇ ಸಿಕ್ಕಿಬಿಟ್ಟರು ಎಂದು ತಿಳಿದುಕೊಳ್ಳುತ್ತೀರಿ. ಯಾವಾಗ ಪ್ರಪಂಚದವರು ಮರೆತಿಲ್ಲವೋ ಆಗ ನೀವು ಸ್ವಯಂ ಅನುಭವೀಮೂರ್ತಿಗಳಿಗೆ ಸರ್ವ ಪ್ರಾಪ್ತಿಯನ್ನು ಮಾಡಿ ಕೊಡುವ ಆತ್ಮರು ಏಕೆ ಮರೆತುಬಿಡುತ್ತೀರಿ. ಮರೆತುಬಿಡಬಾರದು, ಆದರೆ ಮರೆತುಬಿಡುತ್ತೀರಿ.

ಈ ಹೊಸ ವರ್ಷದಲ್ಲಿ ಬಾಪ್‌ದಾದಾರವರಿಗೆ ಯಾವ ನವೀನತೆಯನ್ನು ತೋರಿಸುವಿರಿ? ಯಾವ ಸಮಯವನ್ನು ಕೊಡಲಾಗಿತ್ತೋ ಅದರ ಅನುಸಾರವಾಗಿ ಎಲ್ಲರೂ ಪರಿಪೂರ್ಣರಾಗಿಯೇ ಕಂಡುಬರುತ್ತೀರಿ. ಲಕ್ಷ್ಯವನ್ನು 1977ನೆಯ ಸಂವತ್ಸರವನ್ನಾಗಿ ಇಟ್ಟುಕೊಳ್ಳಲಾಯಿತು. ಲಕ್ಷ್ಯದ ಅನುಗುಣವಾಗಿ ಬ್ರಾಹ್ಮಣ ಆತ್ಮರು ತಮ್ಮ ತಮ್ಮ ಪುರುಷಾರ್ಥವು ಸಂಪನ್ನ ಆಗಬೇಕು. ನೀವು ಪರಿವರ್ತನೆ ಆಗಲು ಸಿದ್ಧರಾಗಿಯೇ ಇದ್ದೀರಲ್ಲವೇ. ಈಗಿನ ಸಮಯವು ಏನು ದೊರೆತಿದೆಯೋ ಅದು ಬ್ರಾಹ್ಮಣರ ಸ್ವಂತ ಪುರುಷಾರ್ಥದ ಸಲುವಾಗಿ ಅಲ್ಲ. ಆದರೆ ಪ್ರತಿಯೊಂದು ಸಂಕಲ್ಪ, ಪ್ರತಿಯೊಂದು ನುಡಿಯ ಮೂಲಕ ದಾತಾನ ಮಕ್ಕಳು ವಿಶ್ವದ ಆತ್ಮರಿಗೆ ಪ್ರಾಪ್ತಿ ಆಗಿರುವ ಖಜಾನೆಯನ್ನು ನೀಡುವ ಸಲುವಾಗಿ ಇದೆ. ಈ ಹೆಚ್ಚಿನ ಸಮಯ ಸ್ವಯಂನ ಪುರುಷಾರ್ಥದ ಸಲುವಾಗಿ ಅಲ್ಲ. ಆದರೆ ಇತರರಿಗೆ ಸಮಯ, ಗುಣ ಹಾಗೂ ಸರ್ವ ಖಜಾನೆಗಳನ್ನು ನೀಡುವ ಸಲುವಾಗಿ ಇದೆ. ತಂದೆಯು ಯಾವ ಕಾರ್ಯಕ್ಕಾಗಿ ಸಮಯ ಹಾಗೂ ಖಜಾನೆಯನ್ನು ಕೊಟ್ಟಿದ್ದಾರೆಯೋ, ಒಂದುವೇಳೆ ಅದಕ್ಕೆ ಬದಲಾಗಿ ಸ್ವಯಂ ನಿಮಗಾಗಿ ಸಮಯ ಹಾಗೂ ಸಂಪತ್ತನ್ನು ಉಪಯೋಗಿಸಿಕೊಂಡರೆ ಅದೂ ಸಹ ಗಿರಿವಿ ಇಟ್ಟಿರುವ ವಸ್ತುವನ್ನು ನಮ್ಮದನ್ನಾಗಿ ಭಾವಿಸಿದ ಹಾಗೆ. ಈ ವಿಶೇಷ ವರ್ಷವು ಬ್ರಾಹ್ಮಣ ಆತ್ಮರ ಬಗ್ಗೆ ಮಹಾದಾನಿ, ವರದಾನಿ ಆಗುವುದಕ್ಕಾಗಿ ಇದೆ, ಹೇಗೆ ನೀವು ಕಾರ್ಯಕ್ರಮವನ್ನು ತಯಾರಿಸುತ್ತೀರಿ. ಈ ಮಾಸದಲ್ಲಿ ವಿಶೇಷವಾಗಿ ಯೋಗದ ಕಾರ್ಯಕ್ರಮ ಇರುವುದು, ಹಿಂದಿನ ತಿಂಗಳುಗಳಲ್ಲಿ ವಿಶೇಷವಾಗಿ ಸೇವೆಯ ಕಾರ್ಯಕ್ರಮ ಇರುವುದು, ಹೀಗೆ ನಾಟಕದ ಯೋಜನೆಯ ಅನುಸಾರವಾಗಿ ಈ ಹೆಚ್ಚಿನ ಸಮಯವು ಮಹಾದಾನಿ ಆಗುವ ಸಲುವಾಗಿ ದೊರೆತಿದೆ. ಅಲ್ಲಿಯವರೆಗೆ ಹಳೆಯ ಮಾತುಗಳು ಹಳೆಯ ರೀತಿ ಪದ್ಧತಿಯನ್ನು ಎಲ್ಲರೂ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಈ ವರ್ಷದ ಅವಧಿಯು ಇದರ ಸಲುವಾಗಿ ಇಲ್ಲ. ಹೇಗೆ ತಂದೆಯ ಮುಂದೆ ಸ್ವಯಂ ನಿಮ್ಮನ್ನು ಸಮರ್ಪಣೆ ಮಾಡಿಕೊಂಡಿದ್ದೀರೋ ಹಾಗೆ ಈಗ ನಿಮ್ಮ ಸಮಯ ಹಾಗೂ ಸರ್ವ ಪ್ರಾಪ್ತಿಗಳು, ಜ್ಞಾನ, ಗುಣ ಹಾಗು ಶಕ್ತಿಗಳನ್ನು ವಿಶ್ವದ ಸೇವೆಗಾಗಿ ಸಮರ್ಪಣೆ ಮಾಡಿರಿ. ಏನು ಸಂಕಲ್ಪವು ಉತ್ಪನ್ನವಾಗುತ್ತದೆಯೋ ಅದು ವಿಶ್ವದ ಸೇವೆಯ ಸಲುವಾಗಿ ನಿಮಿತ್ತವಾಗಿದೆಯೇ ಎಂದು ಪರಿಶೀಲಿಸಿಕೊಳ್ಳಿರಿ. ಹೀಗೆ ಸೇವೆಗಾಗಿ ಅರ್ಪಣೆ ಆದರೆ ನೀವು ಸ್ವಯಂ ಸಂಪನ್ನವಾಗಿ ಸಹಜವಾಗಿಯೇ ಆಗಿಬಿಡುವಿರಿ. ಹೇಗೆ ಯಾವುದಾದರೂ ಸೇವೆಯ ವಿಶೇಷ ಕಾರ್ಯಕ್ರಮವನ್ನು ತಯಾರಿಸಿದಾಗ ವಿಶೇಷ ಕಾರ್ಯದಲ್ಲಿ ತತ್ಪರರಾಗಿರುವ ಕಾರಣದಿಂದ ಸ್ವಯಂ ನಿಮ್ಮ ವಿಶ್ರಾಂತಿ ಅಥವಾ ಸ್ವಯಂ ನಿಮಗಾಗಿ ಸೌಕರ್ಯವನ್ನು ನೀಡುವ ಸಾಧನಗಳು ಹಾಗೂ ನಡೆಯುತ್ತಾ ನಡೆಯುತ್ತಾ ಅನ್ಯ ಆತ್ಮರ ಮೂಲಕ ಬಂದಿರುವಂತಹ ಸಣ್ಣ ಸಣ್ಣ ಪರೀಕ್ಷೆಗಳಿಗೆ ಗಮನವನ್ನು ಕೊಡುವುದಿಲ್ಲ. ಅವುಗಳಿಂದ ತಪ್ಪಿಸಿಕೊಳ್ಳುತ್ತೀರಿ. ಏಕೆಂದರೆ ಸದಾ ಕಾರ್ಯ ಮುಂದೆ ಇಟ್ಟುಕೊಳ್ಳುತ್ತೀರಿ ಹಾಗೂ ಕಾರ್ಯನಿರತರಾಗಿರುತ್ತೀರಿ. ಸ್ವಯಂ ನಿಮಗಾಗಿ ಸಮಯವನ್ನು ವಿನಿಯೋಗಿಸದೆ ಸೇವೆಗಾಗಿ ವಿಶೇಷವಾಗಿ ವಿನಿಯೋಗಿಸುತ್ತೀರಿ. ಹಾಗೆಯೇ ಈ ಹೊಸ ವರ್ಷದಲ್ಲಿ ಪ್ರತಿಯೊಂದು ಸೆಕೆಂಡ್ ಹಾಗೂ ಸಂಕಲ್ಪವನ್ನು ಸೇವೆಗಾಗಿ ಮೀಸಲಾಗಿದೆ ಎಂದು ತಿಳಿದುಕೊಂಡರೆ, ಈ ಕಾರ್ಯದಲ್ಲಿ ತತ್ಪರರಾದರೆ ಪರೀಕ್ಷೆಗಳಲ್ಲಿ ಹೇಗೆ ಉತ್ತೀರ್ಣರಾಗುವಿರಿ ಎಂದರೆ ಅವು ಯಾವುವೂ ಇಲ್ಲವೇನೋ ಎನ್ನುವಂತೆ, ಸಂಕಲ್ಪದಲ್ಲಿಯೂ ಸಹ ಇದು ಏನಾಗಿತ್ತು ಹಾಗೂ ಏನು ಆಯಿತು ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಸ್ವಯಂ ನಿಮ್ಮನ್ನು ಸಮರ್ಪಣೆ

ಮಾಡಿಕೊಂಡರೆ ಈ ಸೇವೆಯ ಸಂಬಂಧದಲ್ಲಿ ಸಣ್ಣ ದೊಡ್ಡ ಪರೀಕ್ಷೆಗಳು ಹಾಗೂ ಪರಿಸ್ಥಿತಿಗಳು ತಾವಾಗಿಯೇ ಸಮರ್ಪಣೆ ಆಗಿಬಿಡುವುವು. ಹೇಗೆ ಅಗ್ನಿಯಲ್ಲಿ ಪ್ರತಿಯೊಂದು ವಸ್ತುವಿನ ನಾಮ ರೂಪವು ಬದಲಾವಣೆ ಆಗುತ್ತವೆಯೋ ಹಾಗೆಯೇ ಪರೀಕ್ಷೆಯ ಹೆಸರು ರೂಪಗಳು ಬದಲಾವಣೆ ಆಗಿ ಪರೀಕ್ಷೆಯು ಪ್ರಾಪ್ತಿಯ ರೂಪ ಆಗಿಬಿಡುವುದು. ಮಾಯೆ ಎನ್ನುವ ಶಬ್ದದಿಂದ ಗಾಬರಿ ಆಗುವುದಿಲ್ಲ. ಸದಾ ಜಯಶಾಲಿ ಆಗುವ ಆನಂದದಲ್ಲಿ ನರ್ತಿಸುತ್ತಿರುವಿರಿ. ಮಾಯೆಯು ನಿಮ್ಮ ದಾಸಿ ಆಗಿರುವ ಅನುಭವ ಮಾಡುವಿರಿ, ದಾಸಿಯು ಸೇವಾಧಾರಿ ಆಗಿರುವಳೊಋು ಅಥವಾ ಗಾಬರಿಗೊಳಿಸುವಳೋ? ಸ್ವಯಂ ನೀವು ಸೇವೆಯಲ್ಲಿ ಸಮರ್ಪಣೆ ಆದರೆ ಮಾಯೆಯು ತಾನಾಗಿಯೇ ಶರಣಾಗತಿ ಆಗಿಬಿಡುವುದು. ಆದರೆ ನೀವು ಸಮರ್ಪಣೆ ಆಗದಿದ್ದರೆ ಮಾಯೆಯೂ ಸಹ ಚೆನ್ನಾಗಿ ಅವಕಾಶವನ್ನು ತೆಗೆದುಕೊಳ್ಳುತ್ತದೆ. ಅವಕಾಶವನ್ನು ತೆಗೆದುಕೊಳ್ಳುವ ಕಾರಣದಿಂದ ಮಾಯೆಯು ಬ್ರಾಹ್ಮಣರಿಗೂ ಕುಲಪತಿ ಆಗಿಬಿಡುತ್ತದೆ. ಆದ್ದರಿಂದ ಮಾಯೆಯನ್ನು ಕುಲಪತಿಯಾಗಲು ಬಿಡಬೇಡಿರಿ. ಸ್ವಯಂ ನೀವು ಸೇವೆಯ ಅವಕಾಶವನ್ನು ಉಪಯೋಗಿಸಿಕೊಂಡು ಕುಲಪತಿ ಆಗಿರಿ. ಈಗ ಸಮಯವು ಏಕೆ ಸಿಕ್ಕಿದೆ ಎನ್ನುವುದನ್ನು ಕೇಳಿದಿರಾ? ಇನ್ನು ಸಂಪೂರ್ಣ ಆಗಬೇಕಾಗಿದೆ. ಸಂಪೂರ್ಣ ಆತ್ಮವು ಎಂದಿಗೂ ದೂರು ಹೇಳುವುದಿಲ್ಲ. ಆಗಿಯೇಬಿಡುತ್ತದೆ. ಆಗಲೇಬೇಕು ಎನ್ನುವ ಭಾಷೆಯನ್ನು ನುಡಿಯಬಾರದು. ಹೊಸ ವರ್ಷ, ಹೊಸ ಭಾಷೆ, ಹೊಸ ಅನುಭವ ಆಗಲಿ. ಹಳೆಯ ವಸ್ತುವನ್ನು ಕಾಪಾಡಿ ಕೊಳ್ಳುವುದು ಒಳಿತೆನಿಸುತ್ತದೆ. ಆದರೆ ಅದನ್ನು ಉಪಯೋಗಿಸುವುದು ಒಳಿತೆನಿಸುವುದಿಲ್ಲ. ಹಾಗಾದರೆ ನೀವು ಏಕೆ ಉಪಯೋಗಿಸುತ್ತೀರಿ? 5000 ವರ್ಷಗಳ ಸಲುವಾಗಿ ಜೋಪಾನವಾಗಿ ಇಟ್ಟುಕೊಳ್ಳಿರಿ. ಹಳೆಯದರೊಂದಿಗೆ ಪ್ರೀತಿ ಇಡಬೇಡಿರಿ.

ಸದಾ ಭಕ್ತ ಆತ್ಮರು, ಭಿಕಾರೀ ಆತ್ಮರು ಹಾಗೂ ಬಾಯಾರಿರುವ ಆತ್ಮರ ಮುಂದೆ ನಿಮ್ಮನ್ನು ಸಾಕ್ಷಾತ್ ತಂದೆ ಹಾಗೂ ಸಾಕ್ಷಾತ್ಕಾರಮೂರ್ತಿ ಎಂದು ತಿಳಿದುಕೊಂಡು ನಡೆದುಕೊಳ್ಳಿರಿ. ಆ ಮೂರು ಸಾಲುಗಳೂ ಧೀರ್ಘವಾಗಿವೆ. ಈ ಯಾಚಕರ ಸಾಲುಗಳನ್ನು ಸಮಾಪ್ತಿ ಮಾಡುವ ಕಾರ್ಯದಲ್ಲಿ ಈಗ ನಿರತರಾಗಿರಿ, ಬಾಯಾರಿರುವ ಆತ್ಮ ಬಾಯಾರಿಕೆಯನ್ನು ಹಿಂಗಿಸಿರಿ, ನಿರ್ಗತಿಕರಿಗೆ ದಾನವನ್ನು ಕೊಡಿ, ಭಕ್ತರಿಗೆ ಭಕ್ತಿಯ ಫಲವಾದ ತಂದೆಯ ಮಿಲನದ ಮಾರ್ಗವನ್ನು ತೋರಿಸಿರಿ. ಈ ನಿರ್ಗತಿಕರನ್ನು ಸಂಪನ್ನ ಮಾಡುವ ಕಾರ್ಯದಲ್ಲಿ ತತ್ಪರರಾಗಿದ್ದರೆ ಸ್ವಯಂ ನಿಮ್ಮ ಪಾಲಿಗೆ ಏಕೆ ಎನ್ನುವ ಪ್ರಶ್ನೆಯ ಸಾಲು ಸಮಾಪ್ತಿಯಾಗಿಬಿಡುವುದು. ಸಮಯದ ಪ್ರತೀಕ್ಷೆಯಲ್ಲಿ ಇರಬೇಡಿರಿ. ಅದಕ್ಕೆ ಬದಲಾಗಿ ಆ ಮೂರು ಪ್ರಕಾರದ ಆತ್ಮರನ್ನು ಸಂಪನ್ನ ಮಾಡುವ ಕಾರ್ಯದಲ್ಲಿ ತೊಡಗಿರಿ. ವಿನಾಶವು ಯಾವಾಗ ಆಗುವುದು ಎಂದು ಇನ್ನು ಮೇಲೆ ನೀವು ಕೇಳುವುದಿಲ್ಲ ತಾನೆ. ಈ ಮೂರು ಬಗೆಯ ಆತ್ಮರ ಸಾಲುಗಳನ್ನು ಸಮಾಪ್ತಿ ಮಾಡಿದರೆ ಪರಿವರ್ತನೆಯ ಸಮಯವೂ ಸಹ ಸಮಾಪ್ತಿ ಆಗಿಬಿಡುವುದು. ಸಂಗಮಯುಗದ ಸಮಯವು ಸತ್ಯಯುಗಕ್ಕಿಂತ ಶ್ರೇಷ್ಠವಾದುದು ಎಂದು ನಿಮಗೆ ಎನಿಸುವುದಿಲ್ಲವೇ? ಬಳಲಿಹೋಗಿ ಬಿಟ್ಟಿದ್ದೀರಾ? ವಿನಾಶವು ಯಾವಾಗ ಸಂಭವಿಸುವುದು ಎಂದು ನೀವು ಕೇಳುವುದರಿಂದ ನೀವು ಆಯಾಸಗೊಂಡಿರುವುದರಿಂದಲೇ ಹಾಗೆ ಕೇಳುತ್ತೀರಲ್ಲವೇ. ತಂದೆಗೆ ಮಕ್ಕಳ ಮೇಲೆ ಅತಿ ಸ್ನೇಹ ಇದೆ. ತಂದೆಗೆ ಈ ಮೇಳವು ಪ್ರಿಯವಾಗಿದೆ. ಆದರೆ ಮಕ್ಕಳಿಗೆ ಸ್ವರ್ಗವು ಪ್ರಿಯವಾದುದು ಎನಿಸುತ್ತದೆ. ಅಲ್ಲವೇ, ಸ್ವರ್ಗವಂತೂ ನಿಮಗೆ 21 ಜನ್ಮಗಳು ದೊರೆತೇ ದೊರೆಯುತ್ತದೆ. ಆದರೆ ಈ ಸಂಗಮಯುಗವು ನಿಮಗೆ ಮತ್ತೆ ದೊರೆಯುವುದಿಲ್ಲ. ಆದ್ದರಿಂದ ಬೇಸರಗೊಳ್ಳಬೇಡಿರಿ. ಸೇವೆಯಲ್ಲಿ ಮಗ್ನರಾದರೆ ಪ್ರತ್ಯಕ್ಷ ಫಲದ ಸುಖವು ಇಡೀ ಕಲ್ಪದಲ್ಲಿ ಮತ್ತೆಂದೂ ದೊರೆಯುವುದಿಲ್ಲ. ಆದ್ದರಿಂದ ಭಕ್ತರ ಮೊರೆಯನ್ನು ಕೇಳಿರಿ. ದಯಾಹೃದಯರಾಗಿರಿ, ಮಹಾದಾನಿ ಆಗಿ ಮಹಾನ್ ಪುಣ್ಯಾತ್ಮರ ಪಾತ್ರವನ್ನು ಅಭಿನಯಿಸಿರಿ. ಒಳ್ಳೆಯದು.

**ಇಂತಹ ತಂದೆಯ ಆಜ್ಞೆಯನ್ನು ಪಾಲನೆ ಮಾಡುವವರು, ಪ್ರತಿಯೊಂದು ಸಂಕಲ್ಪ ಹಾಗೂ ಕ್ಷಣದಲ್ಲಿ ಶ್ರೀಮತದ ಪಾಲನೆ ಮಾಡುವವರು, ತಂದೆಯ ಸಮಾನ ಸದಾ ವಿಶ್ವದ ಕಾಲ್ಯಾಣಕಾರಿಗಳು, ಮಹಾದಾನಿ, ಮಹಾನ್ ವರದಾನಿ, ಸರ್ವರನ್ನೂ ಸಂಪನ್ನ ಮಾಡುವವರು, ಸದಾ ಸ್ವಯಂ ತಮ್ಮನ್ನು ಸೇವೆಯಲ್ಲಿ ತತ್ಪರರನ್ನಾಗಿ ಮಾಡಿಕೊಳ್ಳುವವರು ಇಂತಹ ತಂದೆಯ ಸಮಾನ ಮಕ್ಕಳಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

**ದೀದಿಯವರೊಂದಿಗೆ.**

ಎಲ್ಲರಿಗೂ ಒಂದು ವಿಷಯದಲ್ಲಿ ನಿರೀಕ್ಷಣೆ ಇದೆ. ಅದು ಯಾವ ವಿಷಯ ಆಗಿದೆ? ಯಾವುದು ಪ್ರಾರಂಭದ ಒಗಟಾಗಿದೆಯೋ ಎಂದರೆ ನಾನು ಯಾರು ಎನ್ನುವುದು. ಅದೇ ಅಂತ್ಯದವರೆಗೂ ಒಗಟು ಇದೆ. ಎಲ್ಲರಿಗೂ ನಾನು ಭವಿಷ್ಯದಲ್ಲಿ ಏನಾಗುವೆನು ಅಥವಾ ಮಾಲೆಯಲ್ಲಿ ಯಾವ ಸ್ಥಾನವನ್ನು ಪಡೆಯುವೆನು ಎನ್ನುವ ನಿರೀಕ್ಷಣೆ ಇದೆ. ಈಗ ಈ ನಿರೀಕ್ಷಣೆ ಯಾವಾಗ ಪೂರ್ತಿ ಆಗುವುದು? ಎಲ್ಲರೂ ಒಬ್ಬರೊಂದಿಗೊಬ್ಬರು ಆತ್ಮಿಕ ಸಂಭಾಷಣೆಯನ್ನೂ ಮಾಡುತ್ತೀರಿ. ಅಷ್ಟರತ್ನಗಳಲ್ಲಿ ಯಾರು ಬರುವರು, ನೂರು ರತ್ನಗಳಲ್ಲಿ ಯಾರು ಬರುವರು ಎನ್ನುವುದರ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳುವಿರಿ. 1600ದ ಪ್ರಶ್ನೆಯೇ ಏಳುವುದಿಲ್ಲ. ಎಂಟರಲ್ಲಿ ಅಥವಾ ನೂರರಲ್ಲಿ ಯಾರು ಇರುವರು ಎನ್ನುವುದರ ಬಗ್ಗೆಯೇ ನೀವು ವಿಚಾರ ಮಾಡುವಿರಿ, ವಿದೇಶಿಯರು ನಾವು ಯಾವ ಮಾಲೆಯಲ್ಲಿ ಬರುವೆವು ಎಂದು ಯೋಚಿಸಬಹುದು. ಅಂತ್ಯದಲ್ಲಿ ಬರುವವರು ನಾವು ಯಾವ ಮಾಲೆಯಲ್ಲಿ ಸೇರುವೆವು ಎಂದು ವೇಗವಾಗಿ ಮುಂದುವರೆಯುತ್ತಿದ್ದೇವೆ ಎಂದು ಯೋಚಿಸುತ್ತಾರೆ. ಆದ್ದರಿಂದ ನನಗೆ ಸ್ಥಾನವು ದೊರೆಯುತ್ತದೆಯೋ ಅಥವಾ ಅಂತ್ಯದಲ್ಲಿ ಬರುವವರಿಗೋ ಎನ್ನುವ ಸಂದಿಗ್ಧತೆ ಇದೆಯಲ್ಲವೇ. ಕೊನೆಯ ಲೆಕ್ಕಾಚಾರ ಏನಾಗಿದೆ? ಪುಸ್ತಕವಂತು ತಂದೆಯ ಬಳಿ ಇದೆಯಲ್ಲವೇ. ಆದರೆ ನಿಗದಿ ಮಾಡಲ್ಪಟ್ಟಿಲ್ಲ. ನೀವು ಸಹ ಕಲಾಸ್ಪರ್ಧೆಯನ್ನು ನಡೆಸಿದಾಗ ಚಿತ್ರವನ್ನು ಹೇಗೆ ಆರಿಸಿದಿರಿ? ಮೊದಲು ಕೆಲವನ್ನು ಪ್ರತ್ಯೇಕ ಮಾಡಿದಿರಿ, ಆಮೇಲೆ ಅವುಗಳಲ್ಲಿ ಒಂದು, ಎರಡು, ಮೂರು ಹೀಗೆ ಕ್ರಮಸಂಖ್ಯೆಯನ್ನು ಹಾಕಿದಿರಿ. ಮೊದಲು ಆರಿಸಬೇಕಾಗುತ್ತದೆ. ಆಮೇಲೆ ಕ್ರಮಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ. ಆದ್ದರಿಂದ ಈಗ ನೀವು ಆರಿಸಿಕೊಳ್ಳಲ್ಪಟ್ಟಿದ್ದೀರಿ. ಆದರೆ ಸ್ಥಾನವು ನಿಗದಿ ಆಗಿಲ್ಲ. (ಕೊನೆಯಲ್ಲಿ ಬರುವವರ ಪರಿಣಾಮವು ಏನಾಗುವುದು) ಸದಾ ಕೆಲವು ಸ್ಥಾನಗಳು ಅಂತ್ಯದವರೆಗೂ ಇರುತ್ತವೆ. ಸ್ಥಾನಗಳನ್ನು ಕಾದಿರಿಸುವಾಗಲೂ ಸಹ ಕೊನೆಯವರೆಗೆ ಕೆಲವು ಸ್ಥಾನಗಳನ್ನು ಭರ್ತಿ ಮಾಡದೆ ಇಡಲಾಗುತ್ತದೆ. ಆದರೆ ಆ ಸ್ಥಾನಗಳಿಗೆ ಬರುವವರು ಕೋಟಿಯಲ್ಲಿ ಯಾರೋ? ಅವರಲ್ಲಿಯೂ ಯಾರೋ ಆಗಿರುತ್ತಾರೆ. ಒಳ್ಳೆಯದು, ನೀವೆಲ್ಲರೂ ಯಾವ ಮಾಲೆಯಲ್ಲಿ ಇದ್ದೀರಿ? ನಿಮ್ಮಲ್ಲಿ ಭರವಸೆ ಇಟ್ಟುಕೊಳ್ಳಿರಿ. ಯಾವುದಾದರೊಂದು ಅಂತಹ ಅದ್ಭುತವಾದ ಘಟನೆಯು ನಡೆಯುವುದು. ಅದರ ಆಧಾರದ ಮೇಲೆ ನಿಮ್ಮೆಲ್ಲರ ಭರವಸೆಗಳು ಪೂರ್ತಿ ಆಗಿಬಿಡುವವು. ಅಷ್ಟರತ್ನಗಳ ವಿಶೇಷತೆಯು ಒಂದು ವಿಶೇಷ ಅಂಶವನ್ನು ಅವಲಂಬಿಸಿದೆ. ಅಷ್ಟರತ್ನಗಳು ವಾಸ್ತವವಾಗಿ ಜ್ಞಾಪಕಾರ್ಥ ಚಿಹ್ನೆ ಆಗಿದ್ದಾರೆ. ವಿಶೇಷವಾಗಿ ಯಾವ ಅಷ್ಟ ಶಕ್ತಿಗಳು ಇವೆಯೋ ಆ ಪ್ರತಿಯೊಂದು ಶಕ್ತಿಯೂ ಅವರ ಜೀವನದಲ್ಲಿ ಪ್ರತ್ಯಕ್ಷದಲ್ಲಿ ಕಂಡುಬರುವುದು. ಒಂದು ವೇಳೆ ಒಂದು ಶಕ್ತಿಯಾದರೂ ಪ್ರತ್ಯಕ್ಷ ಜೀವನದಲ್ಲಿ ಕಡಿಮೆ ಕಂಡು ಬಂದರೆ ಹೇಗೆ, ಹೇಗೆ ಒಂದು ವೇಳೆ ಒಂದು ಮೂರ್ತಿಯ ಒಂದು ಭುಜವು ಛಿದ್ರವಾದರೆ ಆ ಮೂರ್ತಿಯು ಪೂಜಿಸಲು ಯೋಗ್ಯ ಆಗುವುದಿಲ್ಲವೋ ಅದೇ ರೀತಿಯಲ್ಲಿ ಒಂದುವೇಳೆ ಒಂದು ಶಕ್ತಿಯು ಕಡಿಮೆ ಇರುವುದು ಕಂಡು ಬಂದರೂ ಸಹ ಅಷ್ಟದೇವತೆಗಳ ಪಟ್ಟಿಯಲ್ಲಿ ಇಲ್ಲಿಯವರೆಗೆ ಅವರ ಸ್ಥಾನವು ನಿಗದಿ ಆಗಿಲ್ಲ ಎಂದು ಭಾವಿಸಲಾಗುತ್ತದೆ. ಮತ್ತೊಂದು ಅಂಶವೇನೆಂದರೆ ಅಷ್ಟ ದೇವತೆಗಳು ಭಕ್ತರ ವಿಶೇಷವಾದ ಇಷ್ಟದೇವತೆ ಎಂದು ಮಾನ್ಯತೆ ಪಡೆಯುತ್ತಾರೆ. ಇಷ್ಟ ಎಂದರೆ ಮಹಾನ್ ಪೂಜ್ಯ. ಇಷ್ಟದೇವತೆಯ ಮೂಲಕ ಪ್ರತಿಯೊಬ್ಬ ಭಕ್ತರಿಗೂ ಪ್ರತಿಯೊಂದು ಬಗೆಯ ವಿಧಿ ಹಾಗೂ ಸಿದ್ಧಿಯು ಪ್ರಾಪ್ತಿಯಾಗುತ್ತದೆ. ಇಲ್ಲಿಯೂ ಸಹ ಯಾರು ಅಷ್ಟರತ್ನಗಳು ಆಗುವರೋ ಅವರು ಸರ್ವ ಬ್ರಾಹ್ಮಣ ಪರಿವಾರವನ್ನು ಈಗಲೂ ಸಹ ಇಷ್ಟ ಎಂದರೆ ಪ್ರತಿಯೊಂದು ಸಂಕಲ್ಪ ಹಾಗು ನಡವಳಿಕೆಯ ಮೂಲಕ ವಿಧಿ ಹಾಗೂ ಸಹಜ ಸಿದ್ಧಿಯ ಮಾರ್ಗವನ್ನು ದರ್ಶನ ಮಾಡಿಸುವವರು ಎಂದು ಎಲ್ಲರ ಮುಂದೆ ಈಗಲೂ ಸಹ ಅಂತಹ ಮಹಾನ್‌ಮೂರ್ತಿಗಳು ಎಂದು ಗಣಿಸಲ್ಪಡುವರು. ಹೀಗೆ ಅಷ್ಟ ಶಕ್ತಿಗಳೂ ಇರುವವು ಹಾಗೂ ಪರಿವಾರದ ಮುಂದೆ ಇಷ್ಟ ಎಂದರೆ ಶ್ರೇಷ್ಠ ಆತ್ಮ, ಮಹಾನ್ ಆತ್ಮ ವರದಾನಿ ಆತ್ಮದ ರೂಪದಲ್ಲಿ ಇರುವರು. ಇದು ಅಷ್ಟರತ್ನಗಳ ವಿಶೇಷತೆ ಆಗಿದೆ. ಒಳ್ಳೆಯದು.

**ತಂಡಗಳೊಂದಿಗೆ:**

1. ಪ್ರಪಂಚದ ಸ್ಪಂದನಗಳಿಂದ (ವೈಬ್ರೇಷನ್ಸ್) ಅಥವಾ ಮಾಯೆಯಿಂದ ಸುರಕ್ಷಿತರಾಗಿರಲು ಸಹಜ ಸಾಧನ:

ಸದಾ ಒಬ್ಬ ತಂದೆಯ ಹೊರತು ಎರಡನೆಯವರು ಯಾರೂ ಇಲ್ಲ ಎನ್ನುವ ಇದೇ ಒಂದು ಸಂಬಂಧದಲ್ಲಿ ಮಗ್ನ ಆಗಿರಿ. ಯಾರು ಇದೇ ಸಂಬಂಧದಲ್ಲಿ ಮಗ್ನ ಆಗಿರುತ್ತಾರೋ ಅವರು ಮಾಯೆಯ ಪ್ರತಿಯೊಂದು ಪ್ರಕಾರದ ದಾಳಿಯಿಂದ ಸುರಕ್ಷಿತರಾಗಿರುತ್ತಾರೆ. ಹೇಗೆ ಯುದ್ಧದ ಸಮಯದಲ್ಲಿ ಬಾಂಬುಗಳನ್ನು ಹಾಕುವಾಗ ನೆಲಮಾಳಿಗೆಯಲ್ಲಿ ಹೋಗಿ ಸೇರಿಕೊಳ್ಳುತ್ತಾರೆ. ಆಗ ಆ ಬಾಂಬುಗಳ ಪ್ರಭಾವವು ಅವರಿಗೆ ಆಗುವುದಿಲ್ಲ. ಅದೇರೀತಿಯಲ್ಲಿ ಒಂದೇ ಸಂಬಂಧದಲ್ಲಿ ಮಗ್ನ ಆಗಿರುವಾಗ ಪ್ರಪಂಚದ ಸ್ಪಂದನಗಳಿಂದ ಮಾಯೆಯಿಂದ ಸುರಕ್ಷಿತರಾಗಿರುವಿರಿ. ಸದಾ ಲಗನ್ನಿನಲ್ಲಿ ಮಗ್ನ ಆಗಿರುವುದೇ ಸುರಕ್ಷತೆಯ ಸಹಜ ಸಾಧನ ಆಗಿದೆ.

2. ತಂದೆಯ ಸಮೀಪ ಇರುವಂತಹವರ ಮೇಲೆ ತಂದೆಯ ಸತ್ಯ

ಸಂಗದ ಬಣ್ಣವು ಹತ್ತಿರುವುದು. ಸತ್ಯ ಸಂಗದ ಬಣ್ಣವು ಆತ್ಮೀಯತೆಯಾಗಿದೆ. ಹೀಗೆ ಸಮೀಪರತ್ನಗಳು ಸದಾ ಆತ್ಮೀಯತೆಯಲ್ಲಿ ಸ್ಥಿತರಾಗಿರುವವರು. ಶರೀರವನ್ನು ನೋಡುತ್ತದ್ದರೂ ಸಹ ಆತ್ಮರನ್ನು ನೋಡುವರು. ಶರೀರವನ್ನು ನೋಡುತ್ತಾ ಇದ್ದರೂ ಸಹ ನೋಡದಿರುವುದು ಹಾಗೂ ಕಣ್ಣಿಗೆ ಕಾಣದಿರುವ ವಸ್ತುವಾದ ಆತ್ಮವು ಪ್ರತ್ಯಕ್ಷವಾಗಿ ಕಂಡುಬರುವುದು. ಇದೇ ಒಂದು ಅದ್ಭುತ ಲಕ್ಷಣವಾಗಿದೆ. ಆತ್ಮಿಕ ನಶೆಯಲ್ಲಿ ಇರುವವರೇ ತಂದೆಯನ್ನು ಜೊತೆಗಾರರನ್ನಾಗಿ ಮಾಡಿಕೊಳ್ಳಬಲ್ಲರು. ಏಕೆಂದರೆ ತಂದೆಯೂ ಆತ್ಮ ಆಗಿದ್ದಾರೆ.

3. ಹಳೆಯ ಪ್ರಪಂಚದ ಸರ್ವ ಆಕರ್ಷಣೆಗಳಿಂದ ದೂರ ಆಗಲು ಸಹಜ ಯುಕ್ತಿ:

ನಾನು ಅವಿನಾಶಿ ಖಜಾನೆಯ ಮಾಲೀಕ ಆಗಿದ್ದೇನೆ ಎನ್ನುವು ನಶೆಯಲ್ಲಿ ಸದಾ ಇರಿ. ತಂದೆಯ ಖಜಾನೆಯಾದ ಜ್ಞಾನ, ಸುಖ, ಶಾಂತಿ, ಆನಂದ.... ಮೊದಲಾದ ಸರ್ವ ಗುಣಗಳೂ ನನ್ನಲ್ಲಿವೆ. ಮೊದಲು ತಂದೆಯ ಆಸ್ತಿಗೆ ಸ್ವತಹ ಮಾಲೀಕನಾಗಿರುತ್ತಾನೆ. ಅಧಿಕಾರಿ ಆತ್ಮನಿಗೆ ತನ್ನ ಅಧಿಕಾರದ ನಶೆ ಇರುತ್ತದೆ. ನಶೆಯಲ್ಲಿ ಎಲ್ಲವೂ ಮರೆತುಹೋಗುತ್ತದೆ. ಅಲ್ಲವೇ, ಯಾವ ಸ್ಮೃತಿಯೂ ಇರುವುದಿಲ್ಲ. ತಂದೆ ಹಾಗೂ ನಾನು ಎನ್ನುವ ಒಂದೇ ಸ್ಮೃತಿ ಇರುವುದರಿಂದ ಹಳೆಯ ಪ್ರಪಂಚದ ಆಕರ್ಷಣೆಗಳಿಂದ ತಾನಾಗಿಯೇ ದೂರ ಆಗಿಬಿಡುವರು. ನಶೆಯಲ್ಲಿ ಇರುವವರ ಮುಂದೆ ಸದಾ ಗುರಿಯೂ ಸಹ ಸ್ಪಷ್ಟವಾಗಿ ಇರುವುದು. ಲಕ್ಷ್ಯವು ಫರಿಶ್ತೆ(ಸೂಕ್ಷ್ಮದೇವತಾತನ) ಹಾಗೂ ದೇವತಾತನದ್ದು ಆಗಿದೆ.

4. ಒಂದು ಸೆಕೆಂಡ್ ಅದ್ಭುತ ಪಾತ್ರವು ಯಾವುದರಿಂದ ಗೌರವಾರ್ಹವಾಗಿ ಉತ್ತೀರ್ಣರಾಗುತ್ತೀರೋ ಅದು ಯಾವುದಾಗಿದೆ? ಒಂದು ಸೆಕೆಂಡ್‌ನ ಪಾತ್ರವು ಯಾವುದೆಂದರೆ ಇದೀಗಲೇ ಶರೀರದಲ್ಲಿ ಬರುವುದು ಹಾಗೂ ಈಗಲೇ ಶರೀರದಿಂದ ದೂರವಾದ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತ ಆಗಿಬಿಡುವುದು. ಈ ಕ್ಷಣದ ಪಾತ್ರದ ಆಭ್ಯಾಸ ಇದೆಯೇ? ಯಾವಾಗ ಬೇಕಾದರೆ ಆಗ ಅಂತಹ ಸ್ಥಿತಿಯಲ್ಲಿ ಸ್ಥಿತ ಆಗುವಂತಿರಬೇಕು. ಅಂತಿಮ ಪರೀಕ್ಷೆಯು ಒಂದು ಸೆಕೆಂಡ್‌ನದೇ ಆಗಿರುವುದು. ಯಾರು ಈ ಸೆಕೆಂಡ್‌ನ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರೋ ಅವರೇ ಗೌರವವಾಗಿ ಉತ್ತೀರ್ಣ ಆಗುವರು. ಒಂದು ವೇಳೆ ಆ ಒಂದು ಸೆಕೆಂಡ್‌ನಲ್ಲಿ ಏರುಪೇರಿನಲ್ಲಿ ಬಂದುಬಿಟ್ಟರೆ ನಾಪಾಸಾಗಿಬಿಡುತ್ತೀರಿ. ಅಚಲ ಆಗಿದ್ದರೆ ಉತ್ತೀರ್ಣ ಆಗುವಿರಿ. ಅಂತಹ ನಿಯಂತ್ರಣ ಶಕ್ತಿ ಇದೆಯೇ. ಈಗ ಅಂತಹ ಅಭ್ಯಾಸವು ತೀವ್ರರೂಪದ್ದು ನಡೆಯಬೇಕು. ಎಷ್ಟೇ ಗೊಂದಲ ಇದ್ದರೂ ಸ್ವಯಂ ನಿಮ್ಮ ಸ್ಥಿತಿಯು ಅತಿ ಶಾಂತ ಆಗಿರಬೇಕು. ಹೇಗೆ

ಸಾಗರವು ಬಾಹ್ಯದಲ್ಲಿ ಆರ್ಭಟಿಸುತ್ತಿರುವುದು. ಆದರೆ ಒಳಗಡೆ ಪೂರ್ತಿ ಶಾಂತ ಆಗಿರುವುದು. ನಿಮಗೆ ಅಂತಹ ಅಭ್ಯಾಸ ಇರಬೇಕು. ನಿಯಂತ್ರಣಾ ಶಕ್ತಿ ಉಳ್ಳವರೇ ವಿಶ್ವವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಲ್ಲರು. ಯಾರೂ ಸ್ವಯಂ ತಮ್ಮನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾರರೋ ಅವರು ವಿಶ್ವದ ಮೇಲೆ ಹೇಗೆ ರಾಜ್ಯಭಾರ ಮಾಡುವರು? ಒಂದುಗೂಡಿಸುವ ಶಕ್ತಿ ಇರಬೇಕು. ಒಂದು ಸೆಕೆಂಡ್‌ನಲ್ಲಿ ವಿಸ್ತಾರದಿಂದ ಸಾರದಲ್ಲಿ ಬಂದುಬಿಡಬೇಕು ಹಾಗೂ ಒಂದು ಸೆಕೆಂಡ್‌ನಲ್ಲಿ ಸಾರದಿಂದ ವಿಸ್ತಾರದಲ್ಲಿ ಬಂದುಬಿಡಬೇಕು. ಇದೇ ಅದ್ಭುತವಾದ ಪಾತ್ರ ಆಗಿದೆ.

5. ಸದಾ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ಉಯ್ಯಾಲೆ ಆಡುತ್ತಾ ಇರುವಿರಿ. ನಿಮ್ಮನ್ನು ಎಲ್ಲಾ ಆತ್ಮರೂ ಸುಖದಲ್ಲಿ ಓಲಾಡುತ್ತಿರುವುದನ್ನು ಕಂಡು ದುಃಖ ಆಗಿರುವವರು ಸುಖ ಆಗಿಬಿಡಬೇಕು. ನಿಮ್ಮ ಕಣ್ಣುಗಳು, ಮುಖ, ಚಹರೆ ಎಲ್ಲವೂ ಸುಖ ನೀಡುವಂತಹ ಸುಖದಾಯಕ ಆಗಿರಿ. ಯಾರು ಅಂತಹ ಸುಖದಾತ ಆಗುತ್ತಾರೋ ಅವರಿಗೆ ಸಂಕಲ್ಪದಲ್ಲಿಯೂ ಸಹ ದುಃಖದ ಲಹರೆಯು ಬರುವುದು ಅಸಂಭವ. ಒಳ್ಳೆಯದು.

**ಮಧುಬನನಿವಾಸಿ ಸಹೋದರ ಸಹೋದರಿಯರೊಂದಿಗೆ:**

ಮಧುಬನ ನಿವಾಸಿಗಳಾದ ನೀವೆಲ್ಲರೂ ಸದಾ ತಂದೆಯ ನೆನಪಿನಲ್ಲಿ ಲವಲೀನರಾಗಿ ಇರುವಿರಲ್ಲವೇ? ತಂದೆಯ ಸಮಾನ ಸದಾ ಡಬಲ್ ಲೈಟ್ ಸ್ವರೂಪದಲ್ಲಿ ಸ್ಥಿತರಾಗಿರುವವರೂ ಹಾಗೂ ಬಳಲಿಕೆ ಇಲ್ಲದವರೂ ಸದಾ ಆಗಿರುವಿರಲ್ಲವೇ. ಯಾರು ಎಷ್ಟು ಹಗುರ ಆಗಿರುತ್ತಾರೋ ಅಷ್ಟು ಬಳಲಿಕೆ ಇಲ್ಲದವರು ಆಗಿರುತ್ತಾರೆ. ಯಾವುದೇ ಪ್ರಕಾರದ ಹೊರೆಯು ಆಯಾಸಗೊಳಿಸುತ್ತದೆ. ಹೇಗೆ ಶರೀರವು ಭಾರವಾಗಿರುವವರು ಸಹ ಬೇಗ ಬಳಲಿಬಿಡುತ್ತಾರೆ. ಹಗುರ ಆಗಿರುವವರು ಆಯಾಸಗೊಳ್ಳುವುದಿಲ್ಲ. ಹಾಗೆಯೇ ಯಾವುದೇ ಪ್ರಕಾರದ ಭಾರ ಮನಸ್ಸಿನದಾಗಲೀ, ಸಂಪರ್ಕದ್ದಾಗಲೀ, ಸಂಬಂಧದ್ದಾಗಲೀ, ಹೀಗೆ ಯಾವುದೇ ಪ್ರಕಾರದ ಭಾರ ಅಥವಾ ಹೊರೆಯು ದಣಿವನ್ನುಂಟು ಮಾಡುತ್ತದೆ. ಆದರೆ ಮಧುಬನದ ನಿವಾಸಿಗಳಿಗೆ ಬಳಲಿಕೆ ಇಲ್ಲದವರಾಗಿರಿ ಎನ್ನುವ ವರದಾನವು ದೊರೆತಿದೆ. ಆದ್ದರಿಂದ ನೀವು ಅದೃಷ್ಟವಂತರಾಗಿದ್ದೀರಿ ಅಲ್ಲವೇ? ಇನ್ನೂ ಹೆಚ್ಚು ಮೇಳಗಳು ನಡೆಯಲಿದೆ ಎಂದು ಬಯಸುತ್ತೀರಾ? ಮುಂದೆ ಹೋಗುತ್ತಾ ಹೋದಂತೆ ಈ ಮೇಳವು ಅಷ್ಟೇ ದೊಡ್ಡದಾಗುತ್ತಾ ಹೋಗುವುದು; ಸಣ್ಣದಾಗುವುದಿಲ್ಲ. ಎಷ್ಟೇ ವಿಸ್ತರಿಸುತ್ತಾ ಹೋಗುವಿರೋ ಅಷ್ಟು ವಿಸ್ತಾರವಾಗುತ್ತಾ ಹೋಗುವುದು ಎಷ್ಟೆಷ್ಟು ಯೋಜನೆಗಳನ್ನು ತಯಾರಿಸುವಿರೋ ಅಷ್ಟು ವೃದ್ಧಿಯಾಗುತ್ತಾ ಹೋಗುವಿರಿ, ಏಕೆಂದರೆ ಸಂಗಮಯುಗದಲ್ಲಿಯೇ ಈಶ್ವರೀಯ ಪರಿವಾರದ ವೃದ್ಧಿ ಆಗುತ್ತದೆ. ಸಮಯವು ಎಷ್ಟು ಕಡಿಮೆ ಇದೆಯೋ ಅಷ್ಟು ವೃದ್ಧಿ ಆಗುತ್ತಾ ಹೋಗುತ್ತದೆ. ಇನ್ನೂ ಬಹಳ ಆತ್ಮರು ಬಂದುಬಿಟ್ಟರೆ ನಾವು ಉಳಿದುಬಿಡುವೆವು ಎಂದು ತಿಳಿದಿಲ್ಲ ತಾನೆ? ಯಾರೂ ಸ್ವಯಂ ತ್ಯಾಗಮೂರ್ತಿ ಆಗುತ್ತಾರೋ ಅವರಿಗೆ ಎಲ್ಲರ ಬಗ್ಗೆಯೂ ತಾನಾಗಿಯೇ ಚಿಂತೆ ಇರುತ್ತದೆ. ಆದರೆ ನೀವು ನಿಷ್ಕಾಮಿ ಆಗಿದ್ದೀರಲ್ಲವೇ. ಎಷ್ಟು ಪ್ರತಿಯೊಂದು ಇಚ್ಛೆಯು ಸಹಜವಾಗಿ ಪೂರ್ತಿ ಆಗಿಬಿಡುವುದು, ಆನಂದದಲ್ಲಿ, ಪ್ರಾಪ್ತಿಯಲ್ಲಿ ಆಯಾಸವಾಗುವುದಿಲ್ಲ. ಮಧುಬನ ನಿವಾಸಿಗಳು ಪುರುಷಾರ್ಥದ ಹೊಸ ವಿಧಾನವನ್ನು ಏನು ಕಂಡುಹಿಡಿದಿದ್ದೀರಿ. ಮಧುಬನ ನಿವಾಸಿಗಳು ಪುರುಷಾರ್ಥದ ಹೊಸ ಯುಕ್ತಿಗಳನ್ನು ಹುಡುಕಬೇಕು. ಅದನ್ನು ಎಲ್ಲರೂ ಅನುಸರಿಸುವಂತಾಗಬೇಕು. ಹೊಸ ವರ್ಷವು ಪ್ರಾರಂಭವಾಗಿರುವುದರಿಂದ ಹೊಸ ವಿಧಾನವನ್ನು ಕಂಡು ಹಿಡಿಯಬೇಕು. ಸಹಜ ಪುರುಷಾರ್ಥದ ಹೊಸ ಅನ್ವೇಷಣೆಯನ್ನು ಹುಡುಕಿ ಹಾಗೂ ಪ್ರತ್ಯಕ್ಷ ಅನುಭವವನ್ನು ಮಾಡಿ ಇತರರಿಗೆ ತಿಳಿಸಿರಿ. ಸರ್ವ ಆತ್ಮರು ನಿಮ್ಮನ್ನು ಶ್ರೇಷ್ಠರು ಎಂಬ ದೃಷ್ಟಿಯಿಂದ ನೋಡುತ್ತಾರೆ. ಹೇಗೆ ಆಕಾಶದಲ್ಲಿ ಪ್ರಕಾಶಿಸುತ್ತಿರುವ ನಕ್ಷತ್ರಗಳನ್ನು ಶ್ರೇಷ್ಠ ದೃಷ್ಟಿಯಿಂದ ನೋಡುತ್ತಾರೋ ಹಾಗೆಯೇ ನಿಮ್ಮೆಲ್ಲರನ್ನೂ ಸರ್ವಶ್ರೇಷ್ಠ ಮಹಾತ್ಮರು. ಅತಿ ಸೌಭಾಗ್ಯಶಾಲಿಗಳು, ಸಮೀಪ ಆತ್ಮರು ಎಂಬ ದೃಷ್ಟಿಯಿಂದ ನೋಡುತ್ತಾರೆ. ಆದ್ದರಿಂದ ಯಾವ ದೃಷ್ಟಿಯಿಂದ ನೋಡುತ್ತಾರೋ ಅದೇ ಶ್ರೇಷ್ಠತೆಯಲ್ಲಿ ಸ್ಥಿತರಾಗಿರಿ. ನೀವು ಏಳುವುದು, ಕುಳಿತುಕೊಳ್ಳುವುದು ನಡೆದಾಡುವುದು ಎಲ್ಲವನ್ನೂ ಚರಿತ್ರೆಯ ರೂಪದಲ್ಲಿ ನೋಡುತ್ತಾರೆ. ಹೇಗೆ

ತಂದೆಯನ್ನು ನೋಡಿರುವಿರಲ್ಲವೆ ಅಲ್ಲವೇ? ಹಾಗೆಯೇ ಪ್ರತಿಯೊಂದು ಕರ್ಮವನ್ನು ಮಾಡುತ್ತಾ ಚಾರಿತ್ರವಂತರಾಗಿ ಮುಂದೆ ರಂಗಮಂಚ ತಯಾರಾಗಿದೆ. ರಂಗಮಂಚದ ಮೇಲೆ ಎಷ್ಟು ಗಮನ ಇರುತ್ತದೆ. ಅವನು ಕೈ ಎತ್ತಿದರೂ ಸಹ ಎಷ್ಟು ಎಚ್ಚರಿಕೆಯಿಂದ ಎತ್ತುತ್ತಾನೆ. ಏಕೆಂದರೆ ನಮ್ಮನ್ನು ಎಲ್ಲರೂ ನೋಡುವವರಾಗಿರುತ್ತಾರೆ ಎನ್ನುವುದು ಅವನಿಗೆ ಗೊತ್ತಿರುತ್ತದೆ. ಹಾಗೆಯೇ ನಮ್ಮ ಪ್ರತಿಯೊಂದು ಕರ್ಮಕ್ಕೆ ಮಹತ್ವ ಇದೆ. ಬಾಪ್‌ದಾದಾ ಸಹ ಮಧುಬನದ ಆತ್ಮರ ಮಹತ್ವವು ಎಷ್ಟಿದೆಯೋ ಆ ಮಹತ್ವದ ದೃಷ್ಟಿಯಿಂದಲೇ ನೋಡುತ್ತೇವೆ. ಒಳ್ಳೆಯದು.

ಹೊಸ ಯೋಜನೆಯಲ್ಲಿ ಏನು ರೂಪಿಸಿಕೊಳ್ಳಬೇಕೆಂದರೆ ಸ್ವತಃ ಹಾಗೂ ಸಹಜಯೋಗಿ ಹೇಗೆ ಆಗುವುದು ಎನ್ನುವುದು, ಏಕೆಂದರೆ ಎಲ್ಲರೂ ಈ ವರ್ಷದಲ್ಲಿ ಯಾವ ಲಕ್ಷ್ಯವನ್ನು ಇಟ್ಟುಕೊಂಡು ನಡೆಯುತ್ತಿದ್ದಾರೆಂದರೆ ಈಗ ಅಂತ್ಯದಲ್ಲಿ ಸಹಜ ಯೋಗ ಹಾಗೂ ಸ್ವತಃ ಯೋಗದ ಅನುಭವವನ್ನು ಮಾಡಲೇಬೇಕು ಎಂಬುದಾಗಿದೆ. ಆದ್ದರಿಂದ ಸಹಜಯೋಗವು ಯಾವ ಆಧಾರದಿಂದ ಇರುತ್ತದೆ ಅಥವಾ ಸ್ವತಃಯೋಗಿಯಾಗಿ ಯಾವ ಯುಕ್ತಿಯಿಂದ ಆಗಬಹುದು ಎನ್ನುವ ಯೋಜನೆಯನ್ನು ತಯಾರಿಸಿ ಹಾಗೂ ಅನುಭವ ಮಾಡಿ, ಆಮೇಲೆ ಎಲ್ಲರಿಗೂ ತಿಳಿಸಿರಿ, ಆಗ ಅವರು ನಿಮ್ಮ ಗುಣಗಾನ ಮಾಡುವರು. ಶ್ರಮ ಕಡಿಮೆ ಹಾಗೂ ಸಫಲತೆ ಹೆಚ್ಚು ಆಗುವಂತಹ ಹೊಸ ಪುರುಷಾರ್ಥದ ವಿಧಾನವನ್ನು ರೂಪಿಸಿಕೊಳ್ಳಿರಿ. ಯೋಜನೆಯನ್ನು ಹೇಗೆ ತಯಾರು ಮಾಡಿಕೊಳ್ಳಬೇಕೆಂದರೆ ಅದನ್ನು ನೋಡಿ ಎಲ್ಲರೂ ಮಧುಬನ ನಿವಾಸಿಗಳಿಗೆ ಧನ್ಯವಾದವನ್ನು ನೀಡುವಂತಾಗಬೇಕು. ಒಳ್ಳೆಯದು.

**ರಾಜಾಸ್ಥಾನದ ತಂಡದೊಂದಿಗೆ:**

(1) ಮಧುಬನದಲ್ಲಿ ಪ್ರತಿಯೊಂದು ಹೆಜ್ಜೆಯಲ್ಲಿ ಸಹಜ ಸಂಪಾದನೆಯ ಅನುಭವವು ಆಗುತ್ತಿದೆಯೇ? ಮಧುಬನವನ್ನು ವರದಾನಿ ಭೂಮಿಯೆಂದು ಕರೆಯಲಾಗಿದೆ. ಆದರೆ ವರದಾನ ಎಂದು ಸಹಜ ಪ್ರಾಪ್ತಿಗೆ ಹೇಳಲಾಗುತ್ತದೆ. ಆದ್ದರಿಂದ ಮಧುಬನದಲ್ಲಿ ಬರುತ್ತಲೇ ಶ್ರಮ ಪಡುವುದು ಕಡಿಮೆಯಾಗಿಬಿಡುತ್ತದೆ ಹಾಗೂ ಸಹಜ ಪ್ರಾಪ್ತಿಯಾಗುವುದು ಪ್ರಾರಂಭವಾಗಿಬಿಡುತ್ತದೆ. ಹೀಗೆ ಈ ಸ್ವಲ್ಪ ಸಮಯದಲ್ಲಿ ಎಷ್ಟು ಸಂಪಾದನೆಯನ್ನು ಮಾಡಿಕೊಂಡಿದ್ದೀರಿ. ಮಧುಬನದಲ್ಲಿ ಬರುವುದು ಎಂದರೆ ಸಂಪಾದನೆಯ ಖಜಾನೆಯನ್ನು ಸಂಗ್ರಹ ಮಾಡಿಕೊಳ್ಳುವುದು. ಆದ್ದರಿಂದ ಇಂತಹ ಮಾತುಗಳನ್ನು ಅರಿತುಕೊಂಡು ಸ್ವಲ್ಪ ಸಮಯದಲ್ಲಿ ಖಜಾನೆಯನ್ನು ತುಂಬಿಕೊಂಡಿದ್ದಾರಾ? ಏಕೆಂದರೆ ಮಧುಬನವೇ ನೇರವಾದ ಬಾಪ್ ದಾದಾರವರ ಕರ್ಮ ಭೂಮಿ, ಚರಿತ್ರ ಭೂಮಿ, ಸೇವಾ ಭೂಮಿ ಹಾಗೂ ತಪಸ್ವೀ ಭೂಮಿ ಆಗಿದೆ. ಇಲ್ಲಿ ತಪಸ್ಸಿನ ಸ್ಪಂದನಗಳ ವಾಯು ಮಂಡಲ ಇದೆ. ಈ ಎಲ್ಲಾ ಅಂಶಗಳು ಈ ಭೂಮಿಯಲ್ಲಿ ಬಂದರೆ ಸಹಜವಾಗಿ ಅನುಭವ ಮಾಡಬೇಕು. ಹೇಗೆ ಯಾವುದಾದರೂ ವಿಶೇಷವಾದ ಸಂಪಾದನೆಯ ಋತು ಇರುವಾಗ ವ್ಯಾಪಾರಿಗಳು ಸಂಪಾದನೆ ಮಾಡದೆ ಇರಲಾರರು, ನಿದ್ರೆಯ ಸಮಯವನ್ನೂ ಸಹ ತ್ಯಾಗ ಮಾಡುತ್ತಾರೆ. ಹಾಗೆ ಮಧುಬನದಲ್ಲಿ ಸಂಪಾದನೆಯನ್ನು ಮಾಡಿಕೊಳ್ಳಲು ಹೆಚ್ಚಿನ ಲಾಟರಿ ಇದೆ. ತಪಸ್ವೀಕುಮಾರರು ಆಗಿದ್ದೀರಿ ಅಲ್ಲವೇ? ತಪಸ್ವಿಯ ತಪಸ್ಸು ಕೇವಲ ಕುಳಿತಿರುವ ಸಮಯದಲ್ಲಿ ಮಾತ್ರ ಅಲ್ಲ. ತಪಸ್ಸು ಎಂದರೆ ನಡೆದಾಡುತ್ತಾ ಕುಳಿತುಕೊಳ್ಳುವಾಗಲೂ ಸಹ ತಂದೆಯ ಜೊತೆಯಲ್ಲಿ ಬುದ್ಧಿಯ ಸಂಬಂಧ ಇದೆಯಲ್ಲವೇ? ಒಬ್ಬರ ನೆನಪಿನಲ್ಲಿ ಒಬ್ಬರ ಜೊತೆಯಲ್ಲಿ ಭೋಜನ ಸ್ವೀಕಾರ ಮಾಡುವುದೂ ತಪಸ್ಸು ಆಗುತ್ತದೆಯಲ್ಲವೇ? ಸಿಕ್ಕಿರುವ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಂಡು ಸಂಪನ್ನ ಆಗಿರಿ, ಇತರರನ್ನೂ ಮಾಡಿರಿ.

(2) ಜ್ಞಾನಸಾಗರನ ಮಕ್ಕಳಾದ ನೀವು ಸದಾ ಜ್ಞಾನರತ್ನಗಳ ಜೊತೆಯಲ್ಲಿ ಆಟವಾಡುತ್ತಿರುತ್ತೀರಾ? ಎಲ್ಲಕ್ಕಿಂತಲೂ ಶ್ರೇಷ್ಠವಾದ ಅವಿನಾಶಿ ರತ್ನಗಳು ಜ್ಞಾನರತ್ನಗಳಾಗಿವೆ. ಜ್ಞಾನಸಾಗರನ ಮಕ್ಕಳು ಜ್ಞಾನರತ್ನಗಳ ಜೊತೆಯಲ್ಲಿ ಆಟವಾಡುವರು. ಅರ್ಧಕಲ್ಪ ಕಲ್ಲು ಬುದ್ಧಿಯವರಾಗಿದ್ದಿರಿ ಹಾಗೂ ಕಲ್ಲುಗಳೊಂದಿಗೆ ಆಟವಾಡಿದಿರಿ. ಆದ್ದರಿಂದ ದುಃಖ ಅಶಾಂತಿ ಇತ್ತು. ಈಗ ಯಾವುದರ ಜೊತೆಯಲ್ಲಿ ಆಟವಾಡುತ್ತೀರಿ? ಹೇಗೆ ರಾಜನ ಮಕ್ಕಳು ಚಿನ್ನ ಬೆಳ್ಳಿಯ ಆಟದ ವಸ್ತುಗಳನ್ನು ಇಟ್ಟುಕೊಂಡು ಆಟ ಆಡುತ್ತಾರೆ. ಜ್ಞಾನರತ್ನಗಳೊಂದಿಗೆ

ಆಟವಾಡಿದರೆ ದುಃಖ ಅಶಾಂತಿಯ ಅಲೆಯು ಬರುವುದಿಲ್ಲ. ಜ್ಞಾನವು ರತ್ನವೂ ಆಗಿದೆ, ತಿಳುವಳಿಕೆಯೂ ಆಗಿದೆ ತಿಳುವಳಿಕೆಯ ಆಧಾರದಿಂದ ದುಃಖ, ಅಶಾಂತಿ ಜೀವನವು ನನ್ನದಲ್ಲ ಅದು ಬೇರೆಯವರ ಜೀವನ ಆಗಿತ್ತು ಎನ್ನುವ ಅನುಭವ ಆಗುವುದು. ಕಳೆದುಹೋದ ಜೀವನದ ಬಗ್ಗೆ ನಗು ಬರುವುದು.

(3) ಎಲ್ಲರೂ ಸಂತುಷ್ಟಮಣಿ ಆಗಿದ್ದೀರಲ್ಲವೇ. ಮಣಿಯು ಸದಾ ಮಸ್ತಕದ ಮಧ್ಯೆ ಬೆಳಗುತ್ತಿರುತ್ತದೆ. ಕಿರೀಟದಲ್ಲಿ ಮಣಿಗಳಿರುತ್ತವೆ. ಆದ್ದರಿಂದ ಯಾರು ಸಂತುಷ್ಟ ಮಣಿಗಳಾಗಿದ್ದಾರೋ ಅವರು ಸದಾ ತಂದೆಯ ಮಸ್ತಕದಲ್ಲಿ ಇರುತ್ತಾರೆ. ಎಂದರೆ ತಂದೆಯ ನೆನಪಿನಲ್ಲಿ ಇರುತ್ತಾರೆ. ತಂದೆಯೂ ಸಹ ಅವರನ್ನು ನೆನಪು ಮಾಡುತ್ತಾರೆ. ಮಕ್ಕಳು ತಂದೆಯನ್ನು ನೆನಪು ಮಾಡಿದರೆ ತಂದೆಯೂ ಸಹ ಅದಕ್ಕೆ ಪ್ರತಿಯಾಗಿ ಫಲವನ್ನು ನೀಡುತ್ತಾರೆ. ಸದಾ ತಂದೆಯ ನೆನಪಿನಲಿರುವವರು ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ಸಂತುಷ್ಟರಾಗಿರುವರು. ಪರಿಸ್ಥಿತಿಯು ಅಸಂತೋಷ ವನ್ನು ಉಂಟುಮಾಡುವುದಾಗಿದ್ದರೂ ದುಃಖದ ಘಟನೆ ಆಗಿದ್ದರೂ ಸದಾ ಸುಖಿ ಆಗಿರುವರು. ದುಃಖದ ಪರಿಸ್ಥಿತಿಯಲ್ಲಿ ಸುಖದ ಸ್ಥಿತಿ ಇರಲಿ. ಜ್ಞಾನದ ಶಕ್ತಿಯು ಅಂತಹದಾಗಿದೆ. ಯಾವುದೇ ಪರಿಸ್ಥಿತಿ ಇದ್ದರೂ ಸ್ಥಿತಿಯು ಏಕರಸ ಆಗಿರಬೇಕು. ಜ್ಞಾನದಶಕ್ತಿಯ ಆಧಾರದಿಂದ ಬೆಟ್ಟದ ಸಮಾನ ಆಗಿರುವ ಅನುಭವ ಆಗುವುದು ಎಂದರೆ ಅದು ಪರಿಸ್ಥಿತಿಯೇ ಅಲ್ಲ ಎನ್ನುವ ಅನುಭವ ಆಗುವುದು. ಏಕೆಂದರೆ ಯಾವುದೂ ಹೊಸದಲ್ಲ ಎನ್ನುವುದು ಬುದ್ಧಿಯಲ್ಲಿರುವುದು ಅಂತಹ ಸ್ಥಿತಿ ಇದೆಯೇ, ಏನೆ ಸಂಭವಿಸಿದರೂ ಇದೇನೂ ಹೊಸದಲ್ಲ ಎನ್ನುವ ಸ್ಥಿತಿ ಇರುವವರನ್ನೇ ಮಹಾವೀರ ಎಂದು ಕರೆಯಲಾಗುತ್ತದೆ.

(4) ನಿಮ್ಮನ್ನು ಪದಮಾಪದವ ಭಾಗ್ಯಶಾಲಿ ಎಂದು ತಿಳಿದುಕೊಂಡಿದ್ದೀರಾ? ನನ್ನ ಪ್ರತಿಯೊಂದು ಹೆಜ್ಜೆಯಲ್ಲಿ ಪದಮಗಳ ಸಂಪಾದನೆ ಆಗುತ್ತಾ ಇದೆ, ನಾನು ಅಂತಹ ಎಣಿಕೆ ಇಲ್ಲದ ಪದಮಗಳ ಮಾಲಿಕ ಅಗಿದ್ದೇನೆ ಎನ್ನುವ ಅನುಭವವನ್ನು ಮಾಡುತ್ತಿದ್ದೀರಾ? ಇಡೀ ಸೃಷ್ಟಿಯಲ್ಲಿ ತಮ್ಮ ಭಾಗ್ಯವನ್ನು ಇಂತಹ ಶ್ರೇಷ್ಠವನ್ನಾಗಿ ಮಾಡಿಕೊಳ್ಳುವವರು ಕೋಟಿಯಲ್ಲಿ ಕೆಲವರೇ ಇದ್ದಾರಲ್ಲವೇ, ಕೋಟಿಯಲ್ಲಿ ಕೆಲವರು ಆ ಕೆಲವರಲ್ಲಿಯೂ ಯಾರೋ ಎನ್ನುವುದು ಆತ್ಮರಾದ ನಮ್ಮ ಮಹಿಮೆ ಆಗಿದೆ. ಏಕೆಂದರೆ ಸಾಧಾರಣ ರೂಪದಲ್ಲಿ ಬಂದಿರುವ ತಂದೆಯನ್ನು ಹಾಗೂ ತಂದೆಯ ಕರ್ತವ್ಯವನ್ನು ಅರಿತುಕೊಳ್ಳುವುದು ಕೋಟಿಗಳಲ್ಲಿ ಕೆಲವರ ಪಾತ್ರವಾಗಿದೆ. ತಿಳಿದುಕೊಂಡರೆ ಹಾಗೂ ಒಪಿಕೊಂಡು ನಡೆದು ಪಡೆದಂತೆಯೇ, ವಿಶ್ವದ ಮಾಲಿಕನೇ ನಿಮ್ಮವರಾಗಿಬಿಟ್ಟರೆ ವಿಶ್ವವೇ ನಿಮ್ಮದಾಗಿಬಿಡುತ್ತದೆ ಅಲ್ಲವೇ. ಹೇಗೆ ಬೀಜವು ನಿಮ್ಮ ಕೈಯಲ್ಲಿ ಇದ್ದರೆ ವೃಕ್ಷವು ಇದ್ದಂತೆಯೇ ಅಲ್ಲವೇ. ಯಾರನ್ನು ಹುಡುಕುತ್ತಿದ್ದೀರೋ ಅವರನ್ನೇ ಪಡೆದುಬಿಟ್ಟಿದ್ದೀರಿ. ಮನೆಯಲ್ಲಿ ಕುಳಿತಿದ್ದಂತೆಯೇ ಭಗವಂತನು ದೊರೆತಿದ್ದರಿಂದ ನಿಮಗೆ ಎಷ್ಟು ಆನಂದ ಆಗಬೇಕು. ಭಗವಂತನು ನನ್ನನ್ನು ತನ್ನ ಮಗುವನ್ನಾಗಿ ಮಾಡಿಕೊಂಡಿದ್ದಾರೆ ಎನ್ನುವ ಅನಂದದಲ್ಲಿಯೇ ಇದ್ದರೆ ಬೇರೆ ಎಲ್ಲಿಯೂ ಕಣ್ಣು ಆಸಕ್ತ ಅಗುವುದಿಲ್ಲ ಮುಂದೆಯೇ ನೋಡುತ್ತಿದ್ದರೂ ಸಹ ದೃಷ್ಟಿಯು ಆ ಕಡೆಗೆ ಹೋಗುವುದಿಲ್ಲ ತಂದೆಯು ದೊರೆತಿರುವುದರಿಂದ ಎಲ್ಲವೂ ದೊರೆತಂತೆಯೇ ಎನ್ನುವುದೇ ಎಲ್ಲಕ್ಕಿಂತಲೂ ಹೆಚ್ಚಿನ ಆನಂದ ಆಗಿದೆ. ಇದೇ ಆನಂದದಲ್ಲಿ ಮನಸ್ಸಿನಲ್ಲಿ ನರ್ತಿಸುತ್ತಾ ಇರಿ. ಇದಕ್ಕಿಂತಲೂ ಆನಂದದ ಮಾತು ಯಾವುದಿದೆ? ಆದ್ದರಿಂದ ಅತೀಂದ್ರಿಯ ಸುಖವು ಎಂತಹದೆಂದು ತಿಳಿಯಬೇಕಾದರೆ ಗೋಪಗೋಪಿಯನ್ನು ಕೇಳಿರಿ ಎನ್ನುವ ಗಾಯನ ಇದೆ.

(5) ಸದಾ ನಿಮ್ಮನ್ನು ಸೌಭಾಗ್ಯಶಾಲಿಗಳು ಎಂದು ತಿಳಿದುಕೊಂಡಿದ್ದೀರಾ? ಇಡೀ ವಿಶ್ವದಲ್ಲಿ ಎಲ್ಲರಿಗಿಂತಲೂ ಶ್ರೇಷ್ಠ ಅದೃಷ್ಟ ಎಂದರೆ ಭಾಗ್ಯವು ನಮ್ಮದಾಗಿದೆ ಎನ್ನುವ ನಿಶ್ಚಯವಾಗಿದೆ. ನಮ್ಮಂತಹ ಸೌಭಾಗ್ಯಶಾಲಿಗಳು ಬೇರೆಯಾರೂ ಇರಲು ಸಾಧ್ಯವಿಲ್ಲ ಎನ್ನುವ ನಿಶ್ಚಯ ಇರುತ್ತದೆಯೇ, ತಂದೆಯು ಸ್ವಯಂ ಬಂದು ನನ್ನನ್ನು ತಮ್ಮ ಮಗುವನ್ನಾಗಿ ಮಾಡಿಕೊಂಡಿದ್ದಾರೆ. ಈ ಭಾಗ್ಯದ ವರ್ಣಣೆಯನ್ನು ಮಾಡುತ್ತಾ ಸದಾ ಆನಂದದಲ್ಲಿ ನರ್ತಿಸುತ್ತಾ ಇರಿ. ಮನುಷ್ಯರ ಅದೃಷ್ಟ ಎಂತಹದಾಗಿದೆ. ಈಗತಾನೇ ಸುಖ ಇರುವುದು, ಇದೀಗಲೇ ದುಃಖ ಆಗುವುದು. ಆದರೆ ನಿಮ್ಮ ಭಾಗ್ಯವು ಅವಿನಾಶಿ ಅಗಿದೆ. ಸದಾ ಆನಂದ ಸ್ವರೂಪ ಉಳ್ಳ ಅದೃಷ್ಟವಂತರಾಗಿದ್ದೀರಿ. ಯಾವುದು

ಸ್ವಪ್ನದಲ್ಲಿಯೂ ಸಹ ಇರಲಿಲ್ಲವೋ ಅದು ಪ್ರಾಪ್ತಿ ಆಗಿಬಿಟ್ಟಿತು. ತಂದೆಯು ದೊರೆತರ ಎಲ್ಲವೂ ದೊರಕಿಬಿಟ್ಟಿತು. ಇದೇ ಆನಂದದಲ್ಲಿ ಇದ್ದರೆ ಸದಾ ಸಮರ್ಥ ಸ್ವರೂಪ ಆಗಿರುವಿರಿ.

(6) ಬ್ರಾಹ್ಮಣ ಜೀವನವು ಎಲ್ಲಕ್ಕಿಂತಲೂ ಶ್ರೇಷ್ಠವಾದುದು ಎಂದು ಮಹಿಮೆ ಮಾಡಲ್ಪಟ್ಟಿದೆ. ಬ್ರಾಹ್ಮಣರ ಹೆಸರೂ ಶ್ರೇಷ್ಠ, ಕರ್ತವ್ಯವೂ ಶ್ರೇಷ್ಠ ಹಾಗೂ ಸ್ಥಿತಿಯೂ ಶ್ರೇಷ್ಠ, ಹೇಗೆ ಬ್ರಾಹ್ಮಣರ ಮಹಿಮೆಯು ಶ್ರೇಷ್ಠ ಆಗಿದೆಯೋ ಹಾಗೆಯೇ ನಿಮ್ಮನ್ನು ಸತ್ಯ ಬ್ರಾಹ್ಮಣರು ಎಂದರೆ ಶ್ರೇಷ್ಠ ಸ್ಥಿತಿಯಲ್ಲಿ ಉಳ್ಳವರು ಎನ್ನುವ ಅನುಭವವನ್ನು ಮಾಡುತ್ತೀರೋ? ಶ್ರೇಷ್ಠರಲ್ಲಿ ಶ್ರೇಷ್ಠ ತಂದೆ ಹಾಗೂ ಶ್ರೇಷ್ಠರಲ್ಲಿ ಶ್ರೇಷ್ಠರಾದ ನೀವು. ತಂದೆ ಹಾಗೂ ನಾವು ಇಬ್ಬರೂ ಶ್ರೇಷ್ಠರಾಗಿದ್ದೇವೆ ಎನ್ನುವ ಸ್ಮೃತಿಯಲ್ಲಿದ್ದರೆ ಕರ್ಮ ಹಾಗೂ ಸಂಕಲ್ಪ ತಾನಾಗಿಯೇ ಶ್ರೇಷ್ಠ ಆಗಿರುವವು.

ಯೋಗಾಗ್ನಿಯಿಂದ ಹಳೆಯ ಖಾತೆಯನ್ನು ಭಸ್ಮ ಮಾಡಿಕೊಳ್ಳಿರಿ. ಅಗ್ನಿಯು ಎಷ್ಟು ಉಲ್ಬಣ ಆಗಿರಬೇಕೆಂದರೆ ವ್ಯರ್ಥದ ಹೆಸರು ಕುರುಹೂ ಸಹ ಸಮಾಪ್ತಿಯಾಗಿಬಿಡುವುದು. ಸಂಗಮಯುಗದಲ್ಲಿ ಹಳೆಯ ಖಾತೆಯನ್ನು ಕೊನೆಮಾಡಿ ಹೊಸದನ್ನು ಪ್ರಾರಂಭಿಸಬೇಕು ಅಲ್ಲವೇ. ಒಂದು ವೇಳೆ ಹಳೆಯ ಖಾತೆಯೂ ಸಹ ಕ್ರಿಯೆಯಲ್ಲಿದ್ದರೆ ವ್ಯರ್ಥ ಸಮರ್ಥದಲ್ಲಿ ಏನು ಆನಂದ ಪ್ರಾಪ್ತಿ ಆಗಬೇಕೋ ಅದು ಆಗುವುದಿಲ್ಲ. ಈಗತಾನೇ ದುರ್ಬಲರು ಮತ್ತೆ ಇದೀಗಲೇ ಸಮರ್ಥರು ಆಗಬೇಕಾಗುತ್ತದೆ. ತಂದೆಯು ಸದಾ ಸಮರ್ಥ ಆಗಿದ್ದಾರೆ. ಆದ್ದರಿಂದ ಮಕ್ಕಳೂ ಸಹ ಸದಾ ಸಮರ್ಥರಾಗಬೇಕು. ಒಳ್ಳೆಯದು.

**ಮಹಾರಾಷ್ಟ್ರ ತಂಡದೊಂದಿಗೆ:**

ಸದಾ ನಿಮ್ಮನ್ನು ಸರ್ವಶ್ರೇಷ್ಠ ಮಹಾನ್ ಆತ್ಮ ಎಂದು ತಿಳಿದುಕೊಂಡು ನಡೆಯುತ್ತೀರೋ? ಮಹಾನ್ ಆತ್ಮ ಎಂದರೆ ಯಾರ ಸ್ಮೃತಿಯಿಂದ ತಾನಾಗಿಯೇ ಪ್ರತಿಯೊಂದು ಸಂಕಲ್ಪ ಹಾಗೂ ಕರ್ಮವು ಮಹತ್ವ ಉಳ್ಳದ್ದು ಎಂದರೆ ಸರ್ವಶ್ರೇಷ್ಠ ಆಗಿರುತ್ತದೆಯೋ ಅವರು ಹೇಗೆ ಈಗಿನ ಸಮಯದ ಪ್ರಪಂಚದಲ್ಲಿ ಅಲ್ಪ ಕಾಲದ ಸ್ಥಾನ ಮಾನವುಳ್ಳ ಆತ್ಮರು ತಮ್ಮ ಪದವಿ ಅಥವಾ ಸ್ಮೃತಿಯಲ್ಲಿ ಇರುವ ಕಾರಣದಿಂದಹಗಲು ರಾತ್ರಿ ತಾನಾಗಿಯೇ ಅದೇ ನಶೆಯಲ್ಲಿ ಇರುತ್ತಾರೆ. ಹಾಗೆಯೇ ತಂದೆಯ ಮೂಲಕ ಪ್ರಾಪ್ತಿಯಾಗಿರುವ ಸ್ಥಾನವನ್ನು ಸ್ಮೃತಿಯಲ್ಲಿಟ್ಟುಕೊಳ್ಳುವುದು ಸಹಜ ಹಾಗೂ ಸ್ವಾಭಾವಿಕವಾಗಿದೆ. ಎಂತಹ ಸ್ಥಾನ ಇದೆಯೋ ಅಂತಹದೇ ಕರ್ಮ, ಎಂತಹ ಹೆಸರೋ ಅಂತಹದೇ ಶ್ರೇಷ್ಠ ಕರ್ಮವೂ ಸಹ ನಡೆಯುತ್ತದೆ. ಆದ್ದರಿಂದ ವರ್ತಮಾನ ಸಮಯದಲ್ಲಿ ಸಹಜಯೋಗಿ ಎನ್ನುವುದರ ಜೊತೆಗೆ ಕರ್ಮಯೋಗಿ ಎಂದು ಎನಿಸಿಕೊಳ್ಳುತ್ತೀರಿ. ಕರ್ಮಯೋಗಿ ಎಂದರೆ ಅವರ ಪ್ರತಿಯೊಂದು ಕರ್ಮದ ಮೂಲಕ ತಂದೆಯೊಂದಿಗೆ ಇರುವ ಸಂಬಂಧವು ಪ್ರತಿಯೊಂದೂ ಆತ್ಮಕ್ಕೆ ಸಾಕ್ಷಾತ್ಕಾರ ಆಗುವುದು. ಹೇಗೆ ಲೌಕಿಕದ ಆತ್ಮರೊಂದಿಗೆ ಸ್ನೇಹವನ್ನು ಇಡುವ ಆತ್ಮದ ಚಹರೆ ಹಾಗೂ ನಡವಳಿಕೆಯಿಂದ ಇವರು ಯಾರದೋ ಸ್ನೇಹದಲ್ಲಿ ತನ್ಮಯರಾಗಿದ್ದಾರೆ ಎನ್ನುವುದು ಕಂಡುಬರುವುದು. ಹಾಗೆಯೇ ನನ್ನ ಪ್ರತಿಯೊಂದು ಕರ್ಮವೂ ತಂದೆಯ ಜೊತೆಗೆ ಸ್ನೇಹಿ ಆತ್ಮ ಆಗಿರುವುದರ ಅನುಭವ ಮಾಡಿಸುತ್ತದೆಯೇ ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿರಿ. ಅಂತಹವರನ್ನೇ ಕರ್ಮಯೋಗಿ ಎಂದು ಕರೆಯಲಾಗುತ್ತದೆ. ಕರ್ಮಯೋಗಿ ಅಥವಾ ಸಹಜರಾಜಯೋಗಿಯ ಪರಿಭಾಷೆಯು ತುಂಬಾ ಗುಹ್ಯವಾದುದು ಆಗಿದೆ. ಕರ್ಮಯೋಗಿ ಹಾಗೂ ಸಹಜ ರಾಜಯೋಗಿಯ ಪ್ರತಿಯೊಂದು ಸಂಕಲ್ಪವೂ ತಂದೆಯ ಸ್ನೇಹದ ಸ್ಪಂದನಗಳನ್ನು ಪ್ರಸಾರ ಮಾಡುವುದಾಗಿರುತ್ತದೆ. ಹೇಗೆ ಜಡಚಿತ್ರಗಳೂ ಸಹ ಶಾಂತಿಯ ಅಲ್ಪಕಾಲದ ಸುಖದ ಸ್ಪಂದನಗಳನ್ನು ಇಲ್ಲಿಯವರೆಗೂ ಆತ್ಮರಿಗೆ ನೀಡುವ ಕಾರ್ಯವನ್ನು ಮಾಡುತ್ತಾ ಇವೆ. ಆದ್ದರಿಂದ ಅವಶ್ಯವಾಗಿ ಚೈತನ್ಯರೂಪದಲ್ಲಿ ಸಂಕಲ್ಪದಿಂದ ಮುಕ್ತ, ವಾಣಿಯಿಂದ ಮುಕ್ತ, ಕರ್ಮದ ಮೂಲಕ ವಿಶ್ವದಲ್ಲಿ ಸದಾ ಸುಖ ಶಾಂತಿಯ ದಾತನಾದ ತಂದೆಯ ಸ್ನೇಹದ ತರಂಗಗಳನ್ನು ಹರಡುವ ಕರ್ತವ್ಯವನ್ನು ಮಾಡಿರುವುದರಿಂದಲೇ ಜಡಚಿತ್ರಗಳಲ್ಲಿಯೂ ಸಹ ಶಾಂತಿ ಇದೆ. ವಿಜ್ಞಾನದ ಯಂತ್ರವೇ ಶಾಖ ಅಥವಾ ಚಳಿಯ ತರಂಗವುಳ್ಳ ವಾಯುಮಂಡಲವನ್ನು ನಿರ್ಮಿಸಬಲ್ಲದು. ಹಾಗೆಯೇ ಮಾಸ್ಟರ್ ಸರ್ವಶಕ್ತಿವಂತರಾಗಿ ನೀವು

ನಿಮ್ಮ ಶಾಂತಿ ಎಂದರೆ ನೆನೆಪಿನ ಶಕ್ತಿಯಿಂದ ನಿಮ್ಮ ಸಂಬಂಧದ ಸ್ಥಿತಿಯ ಮೂಲಕ ಯಾವ ವಾಯುಮಂಡಲ ಅಥವಾ ತರಂಗಗಳನ್ನು ಪ್ರಸಾರ ಮಾಡಲು ಬಯಸುತ್ತೀರೋ ಆದೆಲ್ಲವನ್ನೂ ಮಾಡಬಲ್ಲಿರಾ? ಅಂತಹ ಅಭ್ಯಾಸವನ್ನು ಮಾಡುವಿರಿ. ಈಗತಾನೇ ಸುಖದ ಅಥವಾ ಶಾಂತಿಯ ವಾಯುಮಂಡಲ ಅಥವಾ ಶಕ್ತಿರೂಪದ ವಾಯುಮಂಡಲವನ್ನು ನಿರ್ಮಿಸಬಲ್ಲಿರಾ? ಯಾವ ವಾಯುಮಂಡಲದೊಳಗೆ ಯಾವ ಆತ್ಮರು ಇರುತ್ತಾರೋ ಅವರು ಇಲ್ಲಿ ದುಃಖದಿಂದ ಸುಖದ ವಾಯುಮಂಡಲಕ್ಕೆ ಬಂದು ಬಿಟ್ಟಿದ್ದೇವೆ ಎನ್ನುವ ಅನುಭವವನ್ನು ಮಾಡಬೇಕು. ಇಲ್ಲಿ ಬಹಳ ಸುಖವು ಪ್ರಾಪ್ತಿಯಾಗುತ್ತಾ ಇದೆ. ಎನ್ನುವ ಅನುಭವವನ್ನು ಅವರು ಮಾಡಬೇಕು. ಹೇಗೆ ವಾಯುವಿನ ನಿಯಂತ್ರಣದಲ್ಲಿ ನಾವು ನಿಜವಾಗಿಯೂ ಸೆಕೆಯಿಂದ ತಂಪಿನ ಹವೆಯಲ್ಲಿ ಬಂದುಬಿಟ್ಟಿದ್ದೇವೆ ಅಥವಾ ಚಳಿಯಿಂದ ಶಾಖದಲ್ಲಿ ಬಂದುಬಿಟ್ಟಿದ್ದೇವೆ ಎನ್ನುವ ಅನುಭವವನ್ನು ಮಾಡುತ್ತೇವೆ. ಹಾಗೆಯೇ ನಿಮ್ಮ ನಡವಳಿಕೆ ಹಾಗೂ ಚಹರೆಯ ಮೂಲಕ ನಿಮ್ಮ ಸಂಕಲ್ಪ ಶಕ್ತಿಯ ಮೂಲಕ ಸುಖ, ಶಾಂತಿ ಹಾಗೂ ಶಕ್ತಿಯ ಅನುಭವವನ್ನು ಮಾಡಲಿ, ಹೇಗೆ ಒಂದು ಸೆಕೆಂಡ್ನಲ್ಲಿ ಅಂಧಕಾರದಿಂದ ಬೆಳಕಿಗೆ ಬರುವ ಅನುಭವವನ್ನು ಮಾಡಿದ್ದೀರಿ ಅಲ್ಲವೇ, ಹಾಗೆಯೇ ಈಗಿನ ಕಾಲದ ಮನುಷ್ಯರು ತಮ್ಮ ಶಕ್ತಿಯಿಂದ ಅನುಭವವನ್ನು ಮಾಡಲಾರರರು. ಆದರೆ ನಿವೆಲ್ಲರೂ ನಿಮ್ಮ ಪ್ರಾಪ್ತಿಯ ಅಧಾರದಿಂದ, ನೆನಪಿನ ಆಧಾರದಿಂದ, ಅನುಭವಿಗಳನ್ನಾಗಿ ಮಾಡಬೇಕು. ಇದು ವಾಸ್ತವಿಕ ಸಹಜ ರಾಜಯೋಗ ಅಥವಾ ಕರ್ಮಯೋಗದ ಪರಿಭಾಷೆಯಾಗಿದೆ. ಸ್ವಯಂ ನಿಮ್ಮ ಸಲುವಾಗಿ ಶಾಂತಿಯ ಅಥವಾ ಶಕ್ತಿಯ ಅನುಭವವನ್ನು ಮಾಡುವುದೇನೂ ದೊಡ್ಡ ಮಾತಲ್ಲ. ಆದರೆ ನಿಮ್ಮ ನೆನಪಿನ ಶಕ್ತಿಯ ಮೂಲಕ ಈಗ ವಿಶ್ವದಲ್ಲಿ ಸ್ಪಂದನಗಳ ಮೂಲಕ ವಾಯುಮಂಡಲವನ್ನು ರೂಪಿಸಿರಿ. ಆಗ ರಾಜಯೋಗಿಗಳಲ್ಲಿ ಮೊದಲನೆಯವರು ಎಂದು ಹೇಳಬಹುದು. ಕೇವಲ ಸ್ವಯಂ ನಿಮ್ಮಲ್ಲಿಯೇ ಸಂತುಷ್ಟರಾಗಿ ಉಳಿಯಬಾರದು. ಸಂತುಷ್ಟರಾಗಿ ಇರಬೇಕು ಹಾಗೂ ಸರ್ವರನ್ನೂ ಸಂತುಷ್ಟರನ್ನಾಗಿಸಬೇಕು. ಇದು ಯೋಗಿಯ ಕರ್ತವ್ಯ ಆಗಿದೆ. ಒಳ್ಳೆಯದು. ತಂದೆಯ ಮೂಲಕ ಸದಾ ಆನಂದದಿಂದ ಇರುವ ಸಾಧನವು ದೊರೆತಿದೆಯಲ್ಲವೇ? ಎಂತಹ ಪರಿಸ್ಥಿತಿಯೇ ಇದ್ದರೂ ನಿಮ್ಮ ಬಳಿ ಸಾಧನ ಇದ್ದರೆ ಸದಾ ಆನಂದದಿಂದ ಇರಬಹುದು. ಕೇವಲ ತಂದೆಯ ನೆನಪನ್ನು ಮಾಡುವ ಸಾಧನವೇ ಬಹಳ ದೊಡ್ಡ ಸಾಧನ ಆಗಿದೆ. ತಂದೆಯಿಂದ ಹೇಳಿದಕೂಡಲೇ ಆನಂದದ ಪ್ರಾಪ್ತಿ ಆಗುವುದು. ಇಂತಹ ಸಾಧನವನ್ನು ಸದಾ ಉಪಯೋಗಿಸಿಕೊಳ್ಳುತ್ತಾ ಇರಿ. ತಂದೆ ಎಂಬ ಶಬ್ದವನ್ನು ನೆನಪು ಮಾಡುವುದೇ ವಿದ್ಯುತ್ ಬಟನನ್ನು ಒತ್ತುವುದು ಆಗಿದೆ. ಹೇಗೆ ವಿದ್ಯುತ್ ಬಟನನ್ನು ಒತ್ತಿದರೆ ಒಂದು ಸೆಕೆಂಡ್ನಲ್ಲಿ ಅಂಧಕಾರವು ತೊಲಗಿ ಹೋಗುತ್ತದೆ. ಹಾಗೆಯೇ ತಂದೆ ಎಂದು ಕರೆಯುವುದರಿಂದ ಅಂಧಕಾರ ಅಥವಾ ದುಃಖ, ಅಶಾಂತಿ, ತೊಡಕು, ಬೇಸರ, ಉದ್ವೇಗ ಎಲ್ಲವೂ ಒಂದು ಸೆಕೆಂಡ್‌ನಲ್ಲಿ ಕೊನೆಯಾಗಿಬಿಡುವುದು. ಅಂತಹ ಮಂತ್ರವನ್ನು ತಂದೆಯು ಕೊಟ್ಟಿದ್ದಾರೆ. ಇದು ಒಂದೇ ಶಬ್ದದ ಮಂತ್ರ ಆಗಿದೆ. ಕೇವಲ ತಂದೆ ಎನ್ನುವುದಷ್ಟೇ ಎಂತಹ ಸಮಯವೇ ಆಗಿರಲಿ ಈ ಮಂತ್ರವು ಒಂದು ಸೆಕೆಂಡ್ನಲ್ಲಿ ಪಾರು ಮಾಡುವಂತಹುದಾಗಿದೆ. ಕೇವಲ ಈ ಮಂತ್ರವನ್ನು ವಿಧಿಪೂರ್ವಕವಾಗಿ ಸಮಯದಲ್ಲಿ ಕಾರ್ಯದಲ್ಲಿ ಉಪಯೋಗಿಸಿರಿ. ಈ ಒಂದು ಶಬ್ದದ ಮಂತ್ರವು ಅದ್ಭುತವಾದ ಮಂತ್ರಗಾರಿಕೆಯನ್ನು ಮಾಡುವುದಾಗಿದೆ. ಈ ಒಂದು ಶಬ್ದದ ಮೂಲಕ ಏನು ಬೇಕಾದರೆ ಅದನ್ನು ತೆಗೆದುಕೊಳ್ಳಬಹುದು. ಸುಖ, ಶಾಂತಿ, ಶಕ್ತಿ, ಆನಂದ, ಯಾವುದು ಬೇಕೋ ಅದೆಲ್ಲವನ್ನೂ ಪ್ರಾಪ್ತಿ ಮಾಡಿಸಿಕೊಡುವ ಮಂತ್ರ ಆಗಿದೆ. ಆದ್ದರಿಂದ ಮಂತ್ರಗಾರಿಕೆಯ ಮಂತ್ರ ಎನ್ನಲಾಗುವುದು. ನೀವು ಮಕ್ಕಳು ತಂದೆಯ ಸಮಾನ ಬೇಹದ್ ಸೇವಾಧಾರಿ ಆಗಬೇಕು ಎನ್ನುವುದೇ ತಂದೆಯು ಸದಾ ಮಕ್ಕಳ ಬಗ್ಗೆ ಇಟ್ಟುಕೊಳ್ಳುವ ಇಚ್ಛೆ ಆಗಿದೆ. ಅವೆಲ್ಲವೂ ಮಿತಿ (ಹದ್ದಿನ)ಇರುವ ಜವಾಬ್ದಾರಿಗಳು. ಆದರೆ ತಂದೆಯದು ಬೇಹದ್ ಜವಾಬ್ದಾರಿ ಆಗಿದೆ. ಆದ್ದರಿಂದ ಬೇಹದ್ ಜವಾಬ್ದಾರಿಯಲ್ಲಿ ತಂದೆಯ ಸಮಾನ ಆಗಬೇಕಲ್ಲವೇ? ಹೇಗೆ ಹದ್ದಿನ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಸಮಯ ಹಾಗೂ ಶಕ್ತಿಯನ್ನು ವಿನಿಯೋಗಿಸಬೇಕೋ ಹಾಗೆಯೇ ತಂದೆಯ ಈ ಶುಭ ಇಚ್ಛೆಯನ್ನೂ ಸಹ ಪೂರ್ತಿ ಮಾಡಲೇಬೇಕು. ಈಗ ರಾಜಯೋಗಿ ಆಗಲೇ ಬೇಕು. ರಾಜಯೋಗಿಯೇ ರಾಜರಾಜೇಶ್ವರ ಆಗುವುದು. ಆದ್ದರಿಂದ ಮೊದಲನೆಯ ಹಂತವು ರಾಜಯೋಗಿಯದಾಗಿದೆ. ರಾಜ ಯೋಗಿ ಆಗುವುದು ಕಷ್ಟವೇನಲ್ಲ. ಮನೆ ಪರಿವಾರವನ್ನು ತೊರೆಯುವವರು ಯೋಗಿಯಾಗುವುದು ಕಠಿಣ ಆಗುತ್ತದೆ.

**ಬೇರೆ ಬೇರೆ ತಂಡಗಳೊಡನೆ:**

(1) ಈ ಸಮಯದಲ್ಲಿ ಎರಡು ಕಾರ್ಯಗಳೂ ಜೊತೆ ಜೊತೆಗೇ ನಡೆಯುತ್ತಿವೆ. ಒಂದು ಕಡೆ ಹಿಂದಿನ ಲೆಕ್ಕಾಚಾರವನ್ನು ಪೂರ್ತಿ ಮಾಡಿಕೊಳ್ಳುತ್ತಿದ್ದೀರಿ, ಮತ್ತೊಂದು ಕಡೆ ಭವಿಷ್ಯ ಹಾಗೂ ವರ್ತಮಾನದ ಸಲುವಾಗಿ ಸಂಪಾದನೆಯನ್ನು ಮಾಡಿಕೊಳ್ಳುತ್ತಿದ್ದೀರಿ. ಒಂದಕ್ಕೆ ಲಕ್ಷದಷ್ಟು ಸಂಪಾದನೆ ಆಗುವ ಸಮಯವು ಇದೇ ಆಗಿದೆ. ಆದ್ದರಿಂದ ಸದಾ ಪ್ರತಿಯೊಂದು ಕ್ಷಣವೂ ಸಂಪಾದನೆ ಆಗುತ್ತಿದೆಯೇ ಎನ್ನುವುದರಮೇಲೆ ಗಮನ ಇಡಬೇಕು. ಹಿಂದಿನ ಲೆಕ್ಕಾಚಾರವನ್ನು ಮುಕ್ತಾಯ ಮಾಡಿಕೊಳ್ಳುವ ಸಮಯದಲ್ಲಿಯೂ ಸಹ ಸಂಪಾದನೆ ಮಾಡಿಕೊಳ್ಳಬಹುದು. ಏಕೆಂದರೆ ಮುಕ್ತಾಯ ಮಾಡಿಕೊಳ್ಳುವ ಸಾಧನವೂ ನೆನಪು ಆಗಿದೆ. ನೆನಪಿನಿಂದ ಸಂಪಾದನೆಯೂ ಆಗುತ್ತದೆ. ಹಾಗೂ ಲೆಕ್ಕಾಚಾರವು ಮುಕ್ತಾಯ ಆಗುತ್ತದೆ. ಲೆಕ್ಕಾಚಾರವನ್ನು ಮುಗಿಸುವುದರಲ್ಲಿಯೇ ಸಮಯವೆಲ್ಲವೂ ಕಳೆದು ಹೋಗಬಾರದು. ಧರ್ಮದರ್ಶಿ(ಟ್ರಸ್ಟಿ) ಆಗಿ ಮುಕ್ತಾಯ ಮಾಡಿಕೊಳ್ಳಬೇಕು. ಧರ್ಮದರ್ಶಿ ಆಗುವುದೂ ಸಹ ಜಮಾ ಮಾಡುವುದು ಆಗಿದೆ. ಆಜ್ಞಾಪಾಲಕರಾಗಿ ಲೆಕ್ಕಾಚಾರವನ್ನು ಪೂರೈಸಿಕೊಂಡರೂ ಸಂಪಾದನೆ ಆಗುತ್ತದೆ. ವಿಧಿಪೂರ್ವಕವಾಗಿ ಕಾರ್ಯ ಮಾಡುವುದರಿಂದ ಮುಕ್ತಾಯ ಆಗುವುದರ ಜೊತೆಗೆ ಸಂಪಾದನೆಯೂ ಆಗುವುದು.

(2) ಸ್ವದರ್ಶನಚಕ್ರಧಾರಿ ಆಗಿದ್ದೀರಿ ಅಲ್ಲವೇ? ಸ್ವದರ್ಶನಚಕ್ರಧಾರಿ ಆಗಿರುವವರೇ ಭವಿಷ್ಯದಲ್ಲಿ ಛತ್ರಧಾರಿ ಆಗುವರು. ಒಂದುವೇಳೆ ಸ್ವದರ್ಶನ ಚಕ್ರಧಾರಿ ಆಗಿರದಿದ್ದರೆ ಭವಿಷ್ಯದಲ್ಲಿ ಛತ್ರಧಾರಿಗಳೂ ಆಗುವುದಿಲ್ಲ. ಸ್ವದರ್ಶನಚಕ್ರವು ಅನೇಕ ವ್ಯರ್ಥ ಚಕ್ರಗಳನ್ನು ಸಮಾಪ್ತಿ ಮಾಡಿಬಿಡುತ್ತದೆ. ಸ್ವದರ್ಶನಚಕ್ರದ ಮುಂದೆ ಯಾವ ಚಕ್ರವೂ ಉಳಿಯಲಾರದು. ಒಂದು ಸೆಕೆಂಡ್ನಲ್ಲಿ ಸಮಾಪ್ತಿ ಆಗಿಬಿಡುವುದು. ಆದ್ದರಿಂದ ನಿಮ್ಮ ಅಲಂಕಾರವನ್ನು ಸದಾ ಶಾಶ್ವತವಾಗಿ ಇಟ್ಟುಕೊಳ್ಳುತ್ತೀರಾ ಅಥವಾ ಒಮ್ಮೊಮ್ಮೆ ಬಿಡುತ್ತೀರೋ? ಸ್ವದರ್ಶನಚಕ್ರವನ್ನು ಧಾರಣೆ ಮಾಡುವುದು ಎಂದರೆ ಹಗುರ ಆಗುವುದು. ಹಗುರವಾದ ವಸ್ತುವನ್ನು ಸದಾ ಧಾರಣೆ ಮಾಡುವುದೇನೂ ಕಷ್ಟ ಆಗುವುದಿಲ್ಲ. ಸ್ವದರ್ಶನ ಚಕ್ರಧಾರಿ ಆಗುವುದು ಹಗುರ ಆಗುವುದು ಆಗಿದೆ. ಆದ್ದರಿಂದ ನಿರಂತರ ಈ ಚಕ್ರವು ಸುತ್ತುತ್ತಾ ಇರಲಿ. ಇದನ್ನು ಬಿಡಬಾರದು. ಏಕೆಂದರೆ ಪ್ರಾಪ್ತಿಯ ಅನುಭವ ಇದೆಯಲ್ಲವೇ?

(3) ಬಾಯಾರಿರುವ ಆತ್ಮರ ಬಾಯಾರಿಕೆಯನ್ನು ಎಷ್ಟು ಹಿಂಗಿಸುತ್ತೀರೋ ಅಷ್ಟು ಸ್ವಯಂ ನೀವೂ ಸಹ ತೃಪ್ತ ಆತ್ಮ ಆಗಿರುತ್ತೀರಿ. ಇತರರಿಗೆ ಆನಂದವನ್ನು ನೀಡುವುದು ಎಂದರೆ ಸ್ವಯಂ ಆನಂದದಿಂದ ಇರುವುದು. ಹೇಗೆ ದಾನವನ್ನು ನೀಡಿದರೆ ಸಂಪತ್ತು ವೃದ್ಧಿ ಆಗುವುದು. ಹಾಗೆಯೇ ಅನ್ಯ ಆತ್ಮರಿಗೆ ಆನಂದ, ಶಾಂತಿ, ಶಕ್ತಿಯನ್ನು ನೀಡುವುದಷ್ಟೇ ಅಲ್ಲ ತುಂಬಿಕೊಳ್ಳುವುದೂ ಆಗಿದೆ. ಸೇವೆ ಮಾಡಬೇಕು ಎನ್ನುವ ಒಲವು ಉಂಟಾಗಿಬಿಟ್ಟರೆ ನಿದ್ರಿಸುತ್ತಿದ್ದರೂ ಸ್ವಪ್ನದಲ್ಲಿಯೂ ಸಹ ಸೇವೆಯನ್ನು ಮಾಡುವಿರಿ. ಹೇಗೆ ಯೋಗದ ಮೂಲಕ ಸ್ಪರ್ಶವಾಗುತ್ತದೆಯಲ್ಲವೇ? ನಿಮಗೆ ಮಕ್ಕಳಿಗೆ ಬ್ರಾಹ್ಮಣರ ಪರಿಹಾರವೇ ಜಗತ್ತು ಆಗಿದೆ. ಉಳಿದುದು ಯಾವುದೂ ನಿಮ್ಮ ಜಗತ್ತಿಗೆ ಸೇರಿದುದು ಅಲ್ಲ. ಅದನ್ನು ನೋಡುವುದಿಲ್ಲ. ಅದರಲ್ಲಿ ಇರುತ್ತಿದ್ದರೂ ಇರುವುದಿಲ್ಲ. ಆದ್ದರಿಂದ ಸೇವಾಧಾರಿಯ ಸ್ವಪ್ನದಲ್ಲಿ ಏನು ಬರುವುದೆಂದರೆ ತಂದೆ ಹಾಗೂ ಸೇವೆ. ಬೇರೆ ಏನೂ ಇಲ್ಲವೇ ಇಲ್ಲ. ಒಳ್ಳೆಯದು.

(4) ಮಾಯೆಯನ್ನು ಒಂದು ಶಬ್ದದಿಂದ ಮೂರ್ಛೆಗೊಳಿಸಿರಿ, ಇದು ಯಾವ ಶಬ್ದವಾಗಿದೆ? ತಂದೆ ಎನ್ನುವುದು. ಎಲ್ಲಿ ತಂದೆ ಇರುತ್ತಾನೆಯೋ ಅಲ್ಲಿ ಮಾಯೆ ಇರುವುದಿಲ್ಲ. ಒಂದು ವೇಳೆ ಹೃತ್ಪೂರ್ವಕವಾಗಿ ಸಂಬಂಧದಿಂದ, ಸ್ನೇಹದಿಂದ ತಂದೆ ಎಂದು ಕರೆದರೆ ಮಾಯೆಯು ಓಡಿಹೋಗಿಬಿಡುತ್ತದೆ. ಹೇಗೆ ಎಷ್ಟೇ ದೊಡ್ಡ ಕಳ್ಳನಾಗಿದ್ದರೂ ಅವನನ್ನು ಹಿಡಿದುಬಿಟ್ಟಾಗ ದೊಡ್ಡ ಕಳ್ಳನೂ ಸಹ ಕುರಿಯಾಗಿಬಿಡುತ್ತಾನೆ. ಹಾಗೆಯೇ ತಂದೆ ಎನ್ನುವ ಶಬ್ದವು ಹೃದಯದಿಂದ ಹೊರಬಂದರೆ ಕಳ್ಳನು ಬಂಧಿಸಲ್ಪಡುತ್ತಾನೆ. ಒಂದು ಕ್ಷಣದ ಮುಂದೆ ಸಿಂಹದ ರೂಪವನ್ನು ಧರಿಸಿದ್ದ ಮಾಯೆಯು ಒಂದು ಕ್ಷಣದ ನಂತರ ಕುರಿಯಾಗಿ ಬಿಡುತ್ತದೆ. ಆದ್ದರಿಂದ ಈ ಸಾಧನವನ್ನು ಸದಾ ಜೊತೆಯಲ್ಲಿಟ್ಟುಕೊಳ್ಳಿರಿ. ತಂದೆಯನ್ನು ಮರೆತರೆ ಎಲ್ಲವನ್ನೂ ಮರೆತಂತೆ, ಸಾಧನವು ಸಹಜ ಆಗಿದೆ. ಆದರೆ ಪದೇ ಪದೇ ಉಪಯೋಗಿಸಿಕೊಳ್ಳುವ ವಿಧಾನವನ್ನು ಕಲಿಯಬೇಕು. ಒಂದು ಸೆಕೆಂಡ್‌ನಲ್ಲಿ ಪರಿವರ್ತನೆ ಆದರೆ ಆಗ ಇವರಿಗೆ ಸಾಧನವನ್ನು

ಉಪಯೋಗಿಸಿಕೊಳ್ಳುವ ವಿಧಾನವು ಬರುತ್ತದೆ ಎಂದು ತಿಳಿದುಕೊಳ್ಳಬಹುದು. ನಮ್ಮ ತಂದೆ ಎನ್ನುವುದನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಿರಿ. ನನ್ನ ತಂದೆ ಬಂದುಬಿಟ್ಟರೆ ಮಾಯೆಯು ಓಡಿ ಹೋಗಿಬಿಡುತ್ತದೆ.

(5) ಸಹಜಯೋಗಿಯ ಸ್ಥಿತಿಯು ತಾನಾಗಿಯೇ ಇರಬೇಕಾದರೆ ಅನುಸರಿಬೇಕಾದ ವಿಧಿ, ಅಮೃತವೇಳೆಯ ಮಹತ್ವವನ್ನು ಅರಿತುಕೊಳ್ಳಿರಿ. ಅಮೃತವೇಳೆಯು ದಿನದ ಆದಿ ಆಗಿದೆ. ಯಾರೂ ಅಮೃತವೇಳೆಯಲ್ಲಿ ಎಂದರೆ ಇಡೀ ದಿನದ ಆದಿಯ ಸಮಯದಲ್ಲಿ ಶಕ್ತಿಶಾಲಿಯ ಸ್ಥಿತಿಯನ್ನು ರೂಪಿಸಿಕೊಳ್ಳುವರೋ ಅವರಿಗೆ ಇಡೀ ದಿನ ಸಹಾಯವು ದೊರೆಯುವುದು. ಇಡೀ ದಿನದ ಜೀವನವು ಶ್ರೇಷ್ಠ ಆಗಿಬಿಡುವುದು. ಏಕೆಂದರೆ ಅಮೃತ ವೇಳೆಯಲ್ಲಿ ವಿಶೇಷವಾಗಿ ತಂದೆಯಿಂದ ಶಕ್ತಿಯನ್ನು ತುಂಬಿ ಕೊಳ್ಳುವುದರಿಂದ ಶಕ್ತಿ ಸ್ವರೂಪ ಆಗಿ ನಡೆದುಕೊಳ್ಳುವುದರಿಂದ ಕಷ್ಟ ಆಗುವುದಿಲ್ಲ. ಎಂತಹ ಕಾರ್ಯವೇ ಬರಲಿ ಶ್ರಮದ ಅನುಭವವೂ ಆಗುವುದಿಲ್ಲ. ಆದರೆ ಪ್ರಾಪ್ತಿ ಆಗಿರುವ ಶಕ್ತಿಯ ಆಧಾರದಿಂದ ಸಹಜ ಆಗಿಬಿಡುವುದು. ಇದರಿಂದ ಸಹಜ ಯೋಗಿಯ ಸ್ಥಿತಿಯು ತಾನಾಗಿಯೇ ಇರುವುದು, ಅಮೃತವೇಳೆಯಿಂದ ತಪ್ಪಿಸಿಕೊಳ್ಳುವುದು ಎಂದರೆ ಸಂಗಮದ ವಿಶೇಷ ಪ್ರಾಪ್ತಿಯನ್ನು ಕೊನೆ ಮಾಡುವುದು. ಯಾವ ಈಶ್ವರೀಯ ಮರ್ಯಾದೆಗಳಿವೆಯೋ ಆ ಮರ್ಯಾದಾಪೂರ್ವಕ ಜೀವನವನ್ನು ನಡೆಸುವುದರಿಂದ ವಿಶ್ವದ ಮುಂದೆ ಆದರ್ಶ ಆಗಿಬಿಡುವಿರಿ. ವಿಶ್ವವು ನಿಮ್ಮ ಜೀವನವನ್ನು ನೋಡುತ್ತಾ ತನ್ನ ಜೀವನವನ್ನು ರೂಪಿಸಿಕೊಳ್ಳುವುದು. ಆದ್ದರಿಂದ ಮರ್ಯಾದೆಯ ಗೆರೆಯ ಒಳಗೆ ಇದ್ದರೆ ಮಾಯೆಯು ಆವರಿಸಲಾರದು.

ಏನೆ ಆದರೂ ಸ್ವಯಂ ನಿಮ್ಮ ಉತ್ಸಾಹ ಉಲ್ಲಾಸವು ಪ್ರತಿಯೊಂದು ಸೆಕೆಂಡ್ ಹೊಸದು ಆಗಬೇಕು. ಸ್ವಯಂ ನಿಮ್ಮ ಉತ್ಸಾಹ, ಉಲ್ಲಾಸದ ಆಧಾರವು ಸ್ವಯಂ ನೀವೇ ಆಗಿದ್ದೀರಿ. ಅದರಲ್ಲಿ ಯಾರೂ ಬೇರೆಯವರು ಅಡ್ಡಿಮಾಡಲು ಸಾಧ್ಯವಿಲ್ಲ. ಅದರಲ್ಲಿ ಸದಾ ವೃದ್ಧಿಯ ಕಲೆ ಇರಬೇಕು. ಸ್ಥಗಿತವಾಗುವುದು ದುರ್ಬಲರ ಲಕ್ಷಣ ಆಗಿದೆ. ಒಳ್ಳೆಯದು.

ರಿವೈಜ್ ಕೋರ್ಸ್/ಅವ್ಯಕ್ತ ಮುರಳಿ13-01- 1978.

***ನಿರೀಕ್ಷಣೆಗೆ ಮೊದಲು ತಯಾರಿ ಮಾಡಿಕೊಳ್ಳಿರಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶ್ರೇಷ್ಠವಾದ ಮಹಿಮೆಗೆ ಮತ್ತು ಪೂಜೆಗೆ ಯೋಗ್ಯವಾದ ಯೋಗಿ, ಜ್ಞಾನಿ, ದಿವ್ಯಗುಣಧಾರಿ, ಸದಾ ವಿಶ್ವ ಸೇವಾಧಾರಿ, ಬಾಪ್‌ದಾದಾರವರ ಸ್ನೇಹದಲ್ಲಿ ಸಹಯೋಗಿ.

2. ಅಲೌಕಿಕ ತಂದೆಯಿಂದ ನನಗೆ ಪ್ರಾಪ್ತಿಯಾಗಿರುವ ಅಲೌಕಿಕ ಜನ್ಮ, ಅಲೌಕಿಕ ಪ್ರಾಪ್ತಿಗಳು, ಭಕ್ತಾತ್ಮರು ತಮ್ಮ ಕಣ್ಣಿನಲ್ಲಿ ಸಮಾವೇಶಗೊಳಿಸಿಕೊಳ್ಳುವಂತಹ ಶ್ರೇಷ್ಠವಾದವುಗಳಾಗಿವೆ.

3. ನಾನು ಮನಸ್ಸಿನಿಂದ, ಸತ್ಯವಾದ ಹೃದಯದಿಂದ ಸ್ವಯಂ ಅನ್ನು ತಂದೆಯ ಮಗುವಾಗಿ ನಿಶ್ಚಯ ಮಾಡಿಕೊಂಡು, ಆ ಒಂದು ಸೆಕೆಂಡಿನ ಮಹಿಮೆ ಮತ್ತು ಪ್ರಾಪ್ತಿಯನ್ನು ಪಡೆದು ಶೂದ್ರ ಸಂಸ್ಕಾರಗಳನ್ನು ಬ್ರಾಹ್ಮಣ ಸಂಸ್ಕಾರಕ್ಕೆ ಪರಿವರ್ತಿಸಿಕೊಂಡಿದ್ದೇನೆ. (ದೃಷ್ಟಿ, ವೃತ್ತಿ, ಸ್ಮೃತಿ ಪರಿವರ್ತನೆ ಯಾಗುವುದು)

4. ದಾತನ ಮಗುವಾದ ನಾನು ನನ್ನ ಪ್ರತಿಯೊಂದು ಸಂಕಲ್ಪ, ನುಡಿ(ಮಾತು), ಸಮಯ, ಪ್ರಾಪ್ತಿಗಳು, ಜ್ಞಾನ, ಗುಣಗಳನ್ನು, ಶಕ್ತಿಯನ್ನು ವಿಶ್ವ ಸೇವಾರ್ಥ ಸಮರ್ಪಣೆ ಮಾಡಿ ಸಂಪನ್ನವಾಗಿ ತಯಾರಾಗಿರುವ ಮಹಾದಾನಿ, ವರದಾನಿ.

5. ನಾನು ಸ್ವಯಂ ಅನ್ನು ಸೇವೆಯಲ್ಲಿ ಸಮರ್ಪಣೆ ಮಾಡಿರುವ ಮಾಯಾಜೀತ್ ಸ್ವರೂಪ.

6. ನಾನು ಬಾಯಾರಿರುವವರಿಗೆ ಬಾಯಾರಿಕೆಯನ್ನು ಹಿಂಗಿಸಿ, ಭಿಕಾರಿ ಆತ್ಮರಿಗೆ ದಾನವನ್ನು ಕೊಟ್ಟು, ಭಕ್ತಾತ್ಮರಿಗೆ ಭಕ್ತಿಯ ಫಲವಾಗಿ ತಂದೆಯ ಮಿಲನದ ಮಾರ್ಗವನ್ನು ತೋರಿಸಿ ಅವರೆಲ್ಲರನ್ನು ಸಂಪನ್ನವಾಗಿಸಿ ಪರಿವರ್ತನಾ ಸಮಯವನ್ನು ಸಮಾಪ್ತಿ ಮಾಡಿದ್ದೇನೆ.

7. ನಾನು ಭಕ್ತರ ಮೊರೆಯನ್ನು ಕೇಳಿ, ದಯಾಹೃದಯಿಯಾಗಿ, ಮಹಾದಾನಿಯಾಗಿ ಸೇವೆಯಲ್ಲಿ ನಿಮಗ್ನವಾಗಿ ಪ್ರತ್ಯಕ್ಷ ಫಲದ ಅನುಭವದ ಸುಖವನ್ನು ಪಡೆದಿರುವ ಮಹಾನ್ ಪುಣ್ಯಾತ್ಮ.